ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K·R·N·N· 240 ಸಂಪುಟ : 1 ಸಂಚಿಕೆ : 13 ಅಕ್ಟೋಬರ್ 1 ರಿಂದ 15, 1997 ಪುಟಗಳು : 24 ರೂ. 5.



"ಇಳಿದು ಬಾ ತಾಯೇ ಇಳಿದು ಬಾ......"

ಜಗನ್ಮಾತೆ ಆದಿ ಶ್ರೀ ಕಾವೇರಿ

"ಕೊಡಗು ಸಂಗಾತಿ" ಓದುಗರಿಗೆ, ಹಿತೈಷಿಗಳಿಗೆ ಕಾವೇರಿ ಸಂಕ್ರಮಣದ ಹಾರ್ದಿಕ ಶುಭಾಶಯಗಳು

ನಮ್ಮ ಜನಾಂಗದ ಪತ್ರಿಕೆಯಾದ "ಕೊಡಗು ಸಂಗಾತಿ"ಯು
ನಿರಂತರವಾಗಿ ಹೊರಹೊಮ್ಮಲಿ ಎಂದು
ಹಾರೈಸುವ

ಶ್ರೀ ತೆಕ್ಕಡೆ ಬೆಳ್ಳಪ್ಪ ಚಂದ್ರಶೇಖರ್

ವಿಕ್ರಾಂತ್ ಟೈರ್ಸ್

ಮತ್ತು

ಶ್ರೀಮತಿ ತೆಕ್ಕಡೆ ಯಶೋಧ ಚಂದ್ರಶೇಖರ್

ದೈಹಿಕ ಶಿಕ್ಷಣ ಬೋಧಕರು
ಮಹಾರಾಣಿ ಕಾಲೇಜು, ಮೈಸೂರು

ಹಾಗೂ

ಕುಮಾರ್ ತೆಕ್ಕಡೆ ಪವನ್ ಸುಬ್ಬಯ್ಯ
ಕುಮಾರ್ ತೆಕ್ಕಡೆ ಹರ್ಷಿತ್

ಫೋನ್ : **541570**

ವಿಳಾಸ :
ನಂ. 2353, II ಕ್ರಾಸ್, ಸಂಪಿಗೆ ರೋಡ್,
ಕುವೆಂಪುನಗರ, ಮೈಸೂರು

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
ಪಟ್ಟೆಡ ಪಿ. ಶೀಲಾಮಣಿ

ಉಪ ಸಂಪಾದಕ :
ಕಟ್ರತನ ಸಿ. ಜಯರಾಂ

ಸಹ ಸಂಪಾದಕ :
ಹುಲಿಮನೆ ರಮೇಶ್

ವರದಿಗಾರ :
ಪಟ್ಟೆಡ ಎಲ್. ಶಿವಕುಮಾರ್

ಕಾರ್ಯ ನಿರ್ವಾಹಕಿ :
ಕು|| ಗೀತಾ ನೋಂಟಡ್ಕ

ಪತ್ರಿಕಾ ಪ್ರತಿನಿಧಿ :
ಕು|| ಧನು ಚೆರಿಯಮನೆ

ಕಛೇರಿ ನಿರ್ವಹಣೆ :
ಪಟ್ಟೆಡ ಪಿ. ದೀಪಕ್
ಹೊಸೊಕ್ಲು ಹರಿಣಿ ಬೆಳ್ಯಪ್ಪ
ಮುಞ್ಞಪುರ ಧರಣಿ ಗಣಪತಿ

ಮುದ್ರಕರು :
ಮುಞ್ಞಂಡ್ರ ಕೆ. ತಮ್ಮಯ್ಯ
ಆಶೀರ್ವಾದ್ ಪ್ರಿಂಟರ್ಸ್,

ಗೌರವ ಸಂಪಾದಕ :
ಪಟ್ಟೆಡ ಎಂ. ಪ್ರಭಾಕರ್

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 322, ಹಿನಕಲ್ ಗ್ರಾಮ ಮತ್ತು
ಅಂಚೆ [ಅರಳಿಕಟ್ಟೆ ಹತ್ತಿರ]
ಮೈಸೂರು–570 017.
ದೂರವಾಣಿ : **0821–516771**

ಒಳನೋಟ

ಪುಟಗಳು

ಅರೆ ಭಾಷೆರ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	**5 ರೂ.**
ಅರ್ಧ ವಾರ್ಷಿಕ	:	**60 ರೂ.**
ವಾರ್ಷಿಕ ಚಂದಾ	:	**120 ರೂ.**

ಸಂಪಾದಕೀಯ

“ಗೌಡ ಕೇಸರಿ ದಿ|| ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ದಿ ಸ್ಮರಣೆ” ಎಂಬ ಸಂಚಿಕೆ

ತಾ|| **28-9-97**ರ ಭಾನುವಾರ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಬೆಂಗಳೂರು ಇಲ್ಲಿ ನಡೆದ ಒಂದು ಸಮಾರಂಭ. ಅದರಲ್ಲಿ “ದಿ|| ನಿಡ್ಯಮಲೆ ಮುದ್ದಪ್ಪನವರ ಜನ್ಮ ಶತಾಬ್ದಿ ಸ್ಮರಣ ಸಂಚಿಕೆ” ಬಿಡುಗಡೆ. ಮೇಲ್ಕಂಡ ಸಮಾಜದಡಿಯಲ್ಲಿ ಬಿಡುಗಡೆಯಾದ ಸಂಚಿಕೆ ನಮ್ಮ ಬಳಗದ ಕೈಸೇರಿತು. ನಮ್ಮಲ್ಲಿ ಅದನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಗೌಡ ಜನಾಂಗದಲ್ಲಿ ಇಂತಹ ಒಬ್ಬ ಮಹಾನ್ ವ್ಯಕ್ತಿ ಬಾಳಿ ಬದುಕಿ ಬೆಳೆದು ಕಣ್ಮರೆಯಾದ ದುಃಖ ನಮ್ಮನ್ನು ತಟ್ಟಿತು ಈ ಸಂಚಿಕೆಯಲ್ಲಿ ದಿ|| ನಿಡ್ಯಮಲೆ ಮುದ್ದಪ್ಪನವರು ನಡೆದು ಬಂದ ದಾರಿ, ಒಬ್ಬ ದಕ್ಷ, ನೇರ ಬಿಚ್ಚು ನುಡಿಯ ನ್ಯಾಯಧೀಶರಾಗಿ ಸಮಾಜದ ಮುಂದಿನ ಪೀಳಿಗೆಗೆ ಅತೀ ಮಹತ್ವವಾದ ಬಳುವಳಿಯನ್ನು ಬಿಟ್ಟು ಹೋಗಿರುವುದು ಸ್ಪಷ್ಟವಾಗುತ್ತದೆ. ಗೌಡ ಜನಾಂಗ ವಿದ್ಯಾವಂತರಾಗಲೇ ಬೇಕೆಂಬ ಭಾವನೆಯನ್ನು ಹುಟ್ಟು ಹಾಕಿದರು ಎಂದು ಪ್ರಸ್ತಾಪಿಸಲಾಗಿದೆ. ಹಾಗೆ ಅವರ ತಂದೆ, ತಾಯಿ, ಹತ್ತಿರದ ಬಂಧುಗಳ ಬಗ್ಗೆ ಭಾವಚಿತ್ರದೊಡನೆ ಮುದ್ರಿತವಾದ ಈ ಹೊತ್ತಿಗೆ ಕಿರಿದಾಗಿ ಚೊಕ್ಕವಾಗಿದೆ. ರೂ. **20/-** ರ ಮುಖ ಬೆಲೆಯನ್ನು ಹೊಂದಿದೆ.

ಇಲ್ಲಿ ನಮಗನಿಸುವ ಪ್ರಕಾರ ಇಂತಹ ವ್ಯಕ್ತಿಗಳ ಹೊತ್ತಿಗೆಯನ್ನು ಹೊರ ತಂದು ಯುವ ಪೀಳಿಗೆಗೆ ಮಾರ್ಗದರ್ಶನದ ಬದ್ರ ಬುನಾದಿ ಹಾಕುವ ಮಟ್ಟದಲ್ಲಿ ಪ್ರಯತ್ನಗಳು ಇನ್ನು ಮೇಲ್ಮಟ್ಟದಲ್ಲಿ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಬೆಂಗಳೂರು, ಇದರ ಅಧ್ಯಕ್ಷರಾದ ಪೂಜಾರಿ ಮೊಣ್ಣಪ್ಪ ಮತ್ತು ಕಾರ್ಯಕಾರಿಣಿ ಮಂಡಳಿಯ ಪ್ರಯತ್ನ ಶ್ಲಾಘಣೀಯವಾದುದು. ಈ ಹೊತ್ತಿಗೆಯು ಅವರನ್ನು ಪರಿಚಯಿಸುತ್ತಾ ಚಿಕ್ಕಂದಿನ ಕೆಲವು ನೆನಪಿನ ತುಣುಕುಗಳನ್ನು ನೀಡಲಾಗಿದೆ. ಮುದ್ದಪ್ಪನವರ ಚಿಕ್ಕಂದಿನ, ಬಡತನದ ದಿನಗಳಲ್ಲಿ ದನ ಕಾಯುವಾಗ ದನಗಳು ಪಕ್ಕದ ತೋಟಕ್ಕೆ ನುಗ್ಗಿದವಂತೆ. ಹೀಗಾದಾಗ ತೋಟದ ಮಾಲೀಕ ಇವರನ್ನು ಗದರಿಸುತ್ತಾ, “ಸುಮ್ಮನೆ ಕುಳಿತು ಕೊಳ್ಳಲು ನೀನೊಬ್ಬ ಜಡ್ಜ್ ನೋಡು, ಅಯೋಗ್ಯ ದನಗಳನ್ನು ಸರಿಯಾಗಿ ಕಾಯಬೇಕು” ಎಂಬ ಪದಗಳು ಅವರ ಜೀವನದಲ್ಲಿ ಮಹತ್ವದ ಬದಲಾವಣೆಯಾಗಿ ಒಬ್ಬ ಪ್ರಸಿದ್ಧ ನ್ಯಾಯಧೀಶನನ್ನಾಗಿಸಿರಬಹುದು ಎಂಬ ಭಾವನೆಯನ್ನು ತೋಡಿಕೊಳ್ಳಲಾಗಿದೆ. ಕ್ರಿ. ಶ. **1924**ರ ಸುಮಾರಿಗೆ ಇವರೊಬ್ಬರೆ ಕಾನೂನು ಪದವಿ ಪಡೆದ ಕೊಡಗು ಗೌಡ ಜನಾಂಗದ ಮೊದಲಿಗರು ಎಂಬ ಹೆಗ್ಗಳಿಕೆಯನ್ನು ತೋರಿಸಲಾಗಿದೆ. ಏನೇ ಇದ್ದರು ದಿ|| ನಿಡ್ಯಮಲೆ ಮುದ್ದಪ್ಪನವರ ಸ್ಮರಣೆ ಸಂಚಿಕೆಯನ್ನು ಜನಾಂಗದ ಪ್ರತಿಯೊಬ್ಬರು ಕೊಂಡು ಓದಿದಲ್ಲಿ ಇದರಿಂದ ಪ್ರೇರೇಪಿತರಾದ ಹತ್ತಾರು ನಿಡ್ಯಮಲೆ ಮುದ್ದಪ್ಪನವರು ನಮ್ಮ ಸಮಾಜದಲ್ಲಿ ಹುಟ್ಟಿ ಬಂದರೆ ಅದೇನು ಅತಿಶಯೋಕ್ತಿಯಾಗಲಾರದು ಎಂದು ನಮ್ಮ ಅನಿಸಿಕೆ.

ಮಾರುತಿಯ–ಕೀರುತಿ

ಭಾರತದಲ್ಲಿ 96–97ರಲ್ಲಿ ಜನರು 4 ಲಕ್ಷ ಕಾರುಗಳನ್ನು ಹೊಸದಾಗಿ ಖರೀದಿಸಿದರು. ಹಿಂದಿನ ವರ್ಷಕ್ಕಿಂತ 68000 ಹೆಚ್ಚು ಹೊಸ ಕಾರುಗಳು ಮಾರಾಟವಾದವು. ನಾಲ್ಕು ಲಕ್ಷ ಹೊಸ ಕಾರುಗಳ ಪೈಕಿ ಸಿಂಹಪಾಲು ಮಾರುತಿ ಉದ್ಯೋಗ್ ಕಂಪನಿಯದೇ. ಈ ಸಂಸ್ಥೆಯ 3.38 ಲಕ್ಷ ಕಾರುಗಳು ಪೇಟೆಯಲ್ಲಿ ಬಿಕರಿಯಾದವು. ಇವುಗಳಲ್ಲಿ ಹೆಚ್ಚು ಕಡಮೆ ಅರ್ಧ ಪಾಲು ಮಾರುತಿ–800 ಸಣ್ಣ ಕಾರಿನದ್ದಾಗಿತ್ತು. 47000 ಆಮ್ನಿ ವ್ಯಾನ್, 67000 ಜೆನ್ ಕಾರುಗಳು ಮಾರಾಟವಾದವು.

ಮಾರುತಿ–800 ಕಾರಿಗೆ ಇನ್ನೂ ಬೇಡಿಕೆ ಚೆನ್ನಾಗಿದೆ. ಕಾರು ಸಿಗಬೇಕಾದರೆ ಒಂದು ತಿಂಗಳಾದರೂ ಸರದಿ ಕಾಯಬೇಕು. ಕಂಪನಿಯು ಆಮ್ನಿ ಮತ್ತು ಜೆನ್ ಕಾರುಗಳ ಉತ್ಪಾದನೆಯನ್ನು ಏರಿಸಲು ನಿರ್ಧರಿಸಿದೆ. ಮಾರುತಿ–800ರ ಉತ್ಪಾದನೆಯನ್ನು 1.87 ಲಕ್ಷದಿಂದ 1.8 ಲಕ್ಷಕ್ಕೆ ಇಳಿಸುತ್ತಿದೆ. 84–85ರಲ್ಲಿ 45000 ಕಾರು ತಯಾರಿಸುತ್ತಿದ್ದ ಮಾರುತಿ ಉದ್ಯೋಗ್ ಈಗ 4 ಲಕ್ಷ ಕಾರು ನೀಡುವ ಸ್ಥಿತಿಗೆ ಬಂದಿದೆ.

ಪುಷ್ಪ ಸಾಮ್ರಾಜ್ಯದ ನಡುವೆ ಸ್ವಾವಲಂಬಿ ಮಹಿಳೆ
ಶ್ರೀಮತಿ ಕಾಯರ್‌ಮಾರ್ ಸತ್ಯಭಾಮ ರಾಮಣ್ಣ

ಕೊಡಗು ಎಂದಾಕ್ಷಣ ಕಾಫಿ, ಏಲಕ್ಕಿ, ಕಿತ್ತಳೆ,ಕರಿಮೆಣಸು, ಜನರಕಲ್ಪನೆಗೆ ಬಂದು ಬಿಡುತ್ತದೆ. ಆದರೆ ಇಂದು ಅವುಗಳ ನಡುವೆ ಪುಷ್ಪೋದ್ಯಮ, ರೇಷ್ಮೆ ಬೆಳೆಗಳೂ ಪ್ರಮುಖ ಬೆಳೆಗಳ ಸಾಲಿನಲ್ಲಿ ನಿಂತುಕೊಳ್ಳತೊಡಗಿವೆ. ಈ ಎರಡೂ ಬೆಳೆಗಳು ಮಹಿಳೆಯರಿಂದಲೇ ಹೆಚ್ಚಾಗಿ ನಿರ್ವಹಿಸಲ್ಪಡುತ್ತಿರುವುದನ್ನು ಕಾಣಬಹುದು. ಆದರೆ ಇವುಗಳಲ್ಲಿ ಯಶಸ್ವಿಯಾಗಲು ತಾಳ್ಮೆ, ಶ್ರಮದ ದುಡಿಮೆ ಅಗತ್ಯ. ಪುಷ್ಪೋದ್ಯಮದಲ್ಲಿ ಅಸಾಮಾನ್ಯ ಪ್ರಗತಿ ಸಾಧಿಸಿ ಹದಿನೆಂಟು ಬಾರಿ ಜಿಲ್ಲಾ ಫಲಪುಷ್ಪ ಪ್ರದರ್ಶನದಲ್ಲಿ ಸತತವಾಗಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡ ಮಹಿಳೆಯೇ ಶ್ರೀಮತಿ ಕಾಯರ್‌ಮಾರ್ ಸತ್ಯಭಾಮ ರಾಮಣ್ಣ.

ಹೊದ್ದೇಟಿ ಬೋಜಪ್ಪನವರ ನಾಲ್ಕು ಜನ ಮಕ್ಕಳಲ್ಲಿ ಒಬ್ಬಳೇ ಮಗಳಾಗಿ ಜನಿಸಿದ ಇವರಿಗೆ ಚಿಕ್ಕಂದಿನಿಂದಲೇ ಏನಾದರೂ ಸಾಧಿಸುವ ಚಪಲ. ಆ ಚಪಲಕ್ಕೆ ಆಸರೆ ನೀಡಿದ್ದೇ ಆಂಥೋರಿಯಂ ಗಿಡಗಳು. ಇಂದು ಮಡಿಕೇರಿಯ ಸೀನಿಯರ್ ಕಾಲೇಜ್ ಹಿಂಭಾಗದ ಸಹ್ಯಾದ್ರಿ ನಿಲಯಕ್ಕೆ ಭೇಟಿ ನೀಡಿದರೆ ಪುಷ್ಪ ಸಾಗರದ ನಡುವೆ ನಿಂತ ಅನುಭವ ಯಾರನ್ನೂ ಕಾಡದಿರದು. ಹೂವಿನ ಗಿಡ, ಜಗತ್ತಿನ ಯಾವುದೇ ಮೂಲೆಯಲ್ಲೇ ಇರಲಿ, ಎಷ್ಟೇ ಹಣ ಖರ್ಚಾಗಲಿ ಅದನ್ನು ತಂದು ತಮ್ಮ ನೆಲೆಯಲ್ಲಿ ಪ್ರತಿಷ್ಠಾಪಿಸುವ ಬಂಬಲ ಇವರದು. ಹೂ,ಗಿಡ, ಮರಗಳ ದರ್ಶನ ಮಾಡಿಸುತ್ತಾ ನಮ್ಮನ್ನು ಹಾಲೆಂಡ್, ಇಂಗ್ಲೆಂಡ್, ಕಾಶ್ಮೀರ, ಧರ್ಮಸ್ಥಳ ಮೊದಲಾದ ನಾಡುಗಳಲ್ಲಿಸಂಚರಿಸುವ ಅನುಭವದತ್ತ ಕೊಂಡೊಯ್ಯುತ್ತಾರೆ. ಅಲ್ಲಿ ಸುಮಾರು 500 ಬಗೆಯ ಆಂಥೋರಿಯಂ ಗಿಡಗಳು, 150 ಬಗೆಯ ಗುಲಾಬಿ ಗಿಡಗಳು, 50 ಬಗೆಯ ದಾಸವಾಳಗಳ ನಡುವೆ ವಿಶ್ವದಲ್ಲೇ ಅಪರೂಪದ ಕಿತ್ತಳೆ ಜಾತಿಗೆ ಸೇರಿದ 12 ವರುಷಕ್ಕೊಮ್ಮೆ ಹೂ ಬಿಡುವ ವಿಶೇಷ ಗಿಡ



ಸತ್ಯಭಾಮ ರಾಮಣ್ಣ

ವೊಂದು ಎದ್ದು ಕಾಣುತ್ತದೆ. ನಡು ನಡುವೆ ವಿಶ್ವದ ನಾನಾ ಪ್ರದೇಶಗಳ ನಾನಾ ಗಿಡ ಮರಗಳು ಕಂಗೊಳಿಸುತ್ತವೆ. ಆಂಥೋರಿಯಂ ಗಿಡಗಳನ್ನು ವಾಣಿಜ್ಯ ಬೆಳೆಯಾಗ ಬೆಳೆದರೆ ಉತ್ತಮ ಆದಾಯಗಳಿಸಬಹುದು. ಆದರೆ ಸತ್ಯಭಾಮರವರು ಹವ್ಯಾಸಿ ಹೂಬೆಳೆಗಾರರು. ತಮ್ಮ ಗೃಹಲಂಕಾರಕ್ಕೆ ಮಿಕ್ಕಿದ ಆಂಥೋರಿಯಂ ಗಿಡಗಳನ್ನು ಮಾತ್ರ ಮಾರಾಟ ಮಾಡುತ್ತಾರೆ. ದೂರ ದೂರದ ಊರುಗಳಿಂದ ಜನ ಇವರ ಹೂದೋಟದ ಸೊಬಗ ನೋಡ ಬಂದು ಕಣ್ಮನ ತಣಿಸಿಕೊಂಡು ಹಿಂತಿರುಗುತ್ತಾರೆ. ಈ ಹವ್ಯಾಸಕ್ಕೆ ಇವರ ಪತಿಯವರ ಸಹಕಾರವನ್ನು ಇವರು ನೆನೆಯುತ್ತಾರೆ.

ಇಂದು ಎಷ್ಟೋ ಶ್ರೀಮಂತ ಮಹಿಳೆಯರು ಯಾವ ಕೆಲಸವಿಲ್ಲದೆ ಕಾಲಹರಣ ಮಾಡುತ್ತಿರುತ್ತಾರೆ. ಆದರೆ ಸತ್ಯಭಾಮರವರು ಇದಕ್ಕೆ ಭಿನ್ನವಾಗಿ ಸದಾ ಒಂದಲ್ಲ ಒಂದು ಕಾರ್ಯದಲ್ಲಿ ಮಗ್ನರಾಗಿರುತ್ತಾರೆ. ಹೊಲಿಗೆ ಮತ್ತು ನೇಯ್ಗೆಯಲ್ಲಿ ಇವರು ಪರಿಣತಿ ಪಡೆದುಕೊಂಡಿದ್ದಾರೆ. ಚಿಂದಿ ಬಟ್ಟೆಗಳು, ಬಿಸಾಡಬಹುದಾದ ವಸ್ತುಗಳನ್ನೇ ಜೋಡಿಸಿ ಅವುಗಳಿಗೆ ಮೆರಗು ನೀಡುವ ಅಪೂರ್ವ ಕಲೆಗಾರಿಕೆಗೆ ಅವರ ಮನೆಯ ನೆಲ, ಗೋಡೆಗಳಲ್ಲಿ ಮೂಡಿದ ಚಿತ್ತಾರಗಳೇ ಜ್ವಲಂತ ಸಾಕ್ಷಿಯಾಗಿವೆ. ನಿರ್ಜೀವ ವಸ್ತುಗಳಿಗೆ ಜೀವ ತುಂಬಬಲ್ಲ ಈ ಸಂಜೀವಿನಿಯೊಡನೆ ಕೊಡಗು ಸಂಗಾತಿಯು ನಮ್ಮ ಬಡ ಮಹಿಳೆಯರಿಗೇಕೆ ನೀವು ನಿಮ್ಮ ಕಲೆಯನ್ನು ಹಂಚಬಾರದು ಎಂದು ಕೇಳಿದರೆ ಇವರ ಮುಖ ಹೂವಿನಂತೆ ಅರಳುತ್ತದೆ. "ನಾನೂ ಅದನ್ನೇ ಬಯಸುತ್ತೇನೆ. ನಾನು ಅಳಿದರೂ, ನನ್ನ ಕಲೆ ಉಳಿಯಬೇಕಾದರೆ ಅದನ್ನು ಇನ್ನೊಬ್ಬರಿಗೆ ಕಲಿಸಬೇಕು. ಆಗಲೇ ನನಗೆ ಆತ್ಮತೃಪ್ತಿ. ಈಗಾಗಲೇ ನಾನು ಹಲವರಿಗೆ ಕಲಿಸಿಕೊಟ್ಟಿದ್ದೇನೆ. ಕಲಿಯುವವರು ಇಲ್ಲಿಗೆ ಬಂದರೆ ಸದಾ ನನ್ನ ಮನೆಯ ಬಾಗಿಲು ತೆರೆದಿರುತ್ತದೆ. ಹಿಂದೆ ಮಹಿಳಾ ಮಂಡಲದ ಸದಸ್ಯೆಯಾಗಿದ್ದಾಗ ನಾನು ಹೊಲಿಗೆ ಮತ್ತು ಅಡುಗೆಯ ಬಗ್ಗೆ ಹಲವು ಮಹಿಳೆಯರಿಗೆ ತರಬೇತಿ ಕೊಟ್ಟಿದ್ದೆ. ಈಗಲೂ ಬಡ ಮಹಿಳೆಯರು ಸಂಕೋಚ ಬಿಟ್ಟು ಬಂದಲ್ಲಿ ಖಂಡಿತ ಉಚಿತವಾಗಿ ಕಲಿಸಿಕೊಡುವೆ. ನಾನು ಎಲ್ಲಾ ಬಗೆಯ ತಿಂಡಿ, ಬಿಸ್ಕತ್ತುಗಳನ್ನು ತಯಾರಿಸುತ್ತೇನೆ. ಯಾವುದನ್ನೂ ಹಣ ಕೊಟ್ಟು ತರುವ ಪ್ರಶ್ನೆಯೇ ಇಲ್ಲ ಎನ್ನುತ್ತಾರೆ ಈ ಸ್ವಾವಲಂಬಿ ಮಹಿಳೆ. ಪುಸ್ತಕಗಳನ್ನು ಓದಿ, ಇನ್ನೊಬ್ಬರ ನೋಡಿ ಇವರು ಎಲ್ಲವನ್ನೂ ಕರಗತ ಮಾಡಿಕೊಂಡಿದ್ದಾರೆಯೇ ಹೊರತು, ಅದಕ್ಕಾಗಿ ಪ್ರತ್ಯೇಕ ತರಬೇತಿ ಪಡೆದವರಲ್ಲ.

ನಮ್ಮಲ್ಲಿರುವ ಬಡ ಮಹಿಳೆಯರು ಸತ್ಯಭಾಮರವರೊಡನೆ ಬೆರೆತು, ಅವರ ಕಲೆಗಾರಿಕೆಯನ್ನೂ ತಾವೂ ರೂಢಿಸಿಕೊಂಡರೆ, ಅವರ ಬಾಳು ಹಸನಾಗಬಹುದೆಂದು 'ಸಂಗಾತಿ'ಯು ಭಾವಿಸುತ್ತದೆ.

—**ಸಂಗಾತಿ ವರದಿ**

ಪುರುಷ ದೈವ

ಪೂವಾಣಿ ಕಿನ್ನಿವಾಣಿ [ಉಳ್ಳಾಕಳು] ಪ್ರಭಾವದಿಂದ ತುಳುನಾಡಿನಲ್ಲಿ ಅನೇಕರು ಜೈನರಾಗಿ ಮತಾಂತರಗೊಂಡು, ಆಳುವವರು ಜೈನರಾಗಿ ಉಳಿದ ಊಳುವವರು ಅಪರ ಬಂಟರಾಗಿ ಉಳಿದ ಒಂದೇ ಸಮಾಜದಲ್ಲಿ ವರ್ಗ ಸಂಘರ್ಷಕ್ಕೆ ಕಾರಣವಾದಾಗ ನಾಥ ಪಂಥದ ಜೋಗಿಗಳ ಪ್ರದೇಶ ಈ ಪ್ರದೇಶದಲ್ಲಿ ಆಗಿರಬೇಕು. ಇವರು ಜೈನರಾಗಿ ಮತಾಂತರಗೊಳ್ಳುವುದನ್ನು ತಡೆದು ಅಮರ ಸುಳ್ಯ ಪ್ರದೇಶದಿಂದ ಜೈನರನ್ನು ಹಿಮ್ಮೆಟ್ಟಿಸಿರುವುದು ತಿಳಿದು ಬರುತ್ತದೆ.

ವಿಶ್ವನಾಥಸ್ವಾಮಿ [ಕದ್ರಿ], ರಮಣಸ್ವಾಮಿ [ವಿಟ್ಲ], ಭೈರವಸ್ವಾಮಿ [ಕಂದ್ರಪಾಡಿ], ಕುಮಾರಸ್ವಾಮಿ [ಕುಮಾರ ಪರ್ವತ] ಇವರು ನಾಲ್ವರು ಸಹೋದರರು. ಇವರ ತಂದೆ ಶಂಕರ ಪದೇರು. ತಾಯಿ ದೇವಾಂಗ ಪುರ್ಸೇತಿ. ಇವರಿಗೆ ಮಕ್ಕಳಾಗದಾಗ ಕಾಶಿಗೆ ಹರಕೆ ಹೇಳಿಕೊಳ್ಳುತ್ತಾರೆ. ಆಗ ಈ ನಾಲ್ಕು ಮಕ್ಕಳ ಜನನವಾಗುತ್ತದೆ. ಆದರೆ ಅವರ ಬಾಲ್ಯದಲ್ಲಿಯೇ ತಂದೆ, ತಾಯಿ ಮರಣ ಹೊಂದುತ್ತಾರೆ. ಅವರು ಬೆಳೆದು ದೊಡ್ಡವರಾದಾಗ ತಮ್ಮ ಹಿರಿಯರು ಕಾಶಿಗೆ ಹರಕೆ ಹೇಳಿದ್ದು ಗೊತ್ತಾಗುತ್ತದೆ. ಕಾಶಿ ಬಹಳ ದೂರವಿದೆ. ಅಲ್ಲಿಗೆ ಹೋಗುವ ಬದಲು ಆ ಹರಕೆಯನ್ನು ಕಾವೇರಿಯಲ್ಲಿ ಒಪ್ಪಿಸುವ ನಿರ್ಧಾರಕ್ಕೆ ಬರುತ್ತಾರೆ. ಪ್ರಯಾಣಕ್ಕೆ ಸಿದ್ಧತೆಯಾಗುತ್ತದೆ. ಕಿವಿಗೆ ಕುಂಡಲ, ವಿಭೂತಿ, ತ್ರಿಶೂಲ, ಕಿನ್ನರಿ ಮೊದಲಾದವರನ್ನು ತಯಾರಿಸಿಕೊಳ್ಳುತ್ತಾರೆ. ಕಲ್ಯಾಣಪುರ, ಉಡುಪಿ, ಗುರುಪುರ, ಬಂಟ್ವಾಳ, ಪುತ್ತೂರು, ಕಾವು, ಸುಳ್ಯ, ತೋಡಿಕಾನ ಮಾರ್ಗವಾಗಿ ಪಟ್ಟೆ ಗುಡ್ಡೆದಾಟಿ ಭಾಗಮಂಡಲ ಸೇರುತ್ತಾರೆ. ತಲಕಾವೇರಿ ಜಳಕ ಗುಂಡಿಯಲ್ಲಿ ಮಿಂದು ಬೆಳ್ಳಿ ತೊಟ್ಟಿಲಲ್ಲಿ ಬಂಗಾರದ ಬಾಲೆ [ಮಗು] ಯನ್ನು ಮಿಂದ ಚಂಡಿ ಬಟ್ಟೆಯಲ್ಲಿ ಪುಂಡಿಪಣವು [ಒಂದು ಹಿಡಿ ಹಣ] ಒಪ್ಪಿಸುತ್ತಾರೆ. ಕಿನ್ನರಿಯ ನುಡಿಯನ್ನು ಹಾಡಿನಲ್ಲಿ-ಹಾಡಿದ ನುಡಿಯನ್ನು ಕಿನ್ನರಿಯಲ್ಲಿ ಒಪ್ಪಿಸುತ್ತಾ ತ್ರಿಶೂಲ ಚಕ್ರಗಳನ್ನು ತಿರುಗಿಸುತ್ತಾ ನರ್ತಿಸುತ್ತಾರೆ.

ಇವರು ಜೋಗಿಗಳೆಂಬುದು ಒಪ್ಪಿಕೊಳ್ಳಬೇಕಾಗುತ್ತದೆ. ಲಾಕುಳ ಶೈವ, ಭೈರವ, ಕಾಳಾಮುಖ, ಕಾಪಾಲಿಕ ಮತ್ತು ಪಾಶುಪತ ಮತಗಳ ಪ್ರಭಾವ ಈ ಜೋಗಿಗಳಲ್ಲಿ ಕಾಣಬಹುದಾಗಿದೆ. ಲಾಕುಳ ಶೈವರು ಕಾಮವನ್ನೇ ಭಗವತಾರಾಧನೆಯ ಮಾರ್ಗಮಧ್ಯಮವಾಗಿ ಬಳಸಿದ್ದಾರೆ. ಪುರುಷ ಸಹೋದರರು ಭಾಗಮಂಡಲದಲ್ಲಿ ಸೂಳೆಯರ ಮೇಳ ಮಾಡಿದ್ದೇನೆಂದು ಹೇಳಿಕೊಳ್ಳುತ್ತದೆ. ಪಟ್ಟೋಲೆ ಪಳಮೆಯಲ್ಲಿರುವ ಕುಂದ-ಕೊಡಚಿ, ಜೋಯಿ-ಚೂಳಿ ಈ ವಿಚಾರವನ್ನು ಸ್ಥಿರಪಡಿಸುವುದಕ್ಕೆ ಆಧಾರವಾಗುತ್ತದೆ. [ಕಿನ್ನರಪಾಡಿ]

ಭಾಗಮಂಡಲದಿಂದ ಕಂದಪಾಡಿಗೆ ಬಂದು ಅಲ್ಲಿ ಜೈನ ರಾಜ್ಯಭಾರವನ್ನು ಕೊನೆಗೊಳಿಸುತ್ತಾರೆ. ಕುಮಾರ ಪರ್ವತದಲ್ಲಿ ನೆಲೆಸಿದ ಕುಮಾರಸ್ವಾಮಿ ಬಚ್ಚನಾಯಕನನ್ನು ಸಾಧಕ ವಿದ್ಯೆ ಕಲಿಸಿ ಜೈನರಾಗಿದ್ದ ಗ್ರಾಮ ಮುಖಂಡರನ್ನು ಹಿಮ್ಮೆಟ್ಟಿಸಿದನೆಂದು ತಿಳಿದು ಬರುತ್ತದೆ. ಸುಬ್ರಹ್ಮಣ್ಯದಲ್ಲಿ ಪುರುಷ ಭೂತದೊಂದಿಗೆ ಹೊಸಳಿಗೆ ಅಮ್ಮ [ಹೊಸ ಜವುಳಿಗೆ ಅಮ್ಮ]ನ ಆರಾಧನೆ ಇದೆ. ಈಕೆ ಪಂಜದ ಅರಸನ ಪತ್ನಿ ಹಾಗೂ ಬಚ್ಚನಾಯಕನ ತಂಗಿಯಾಗಿರಬೇಕೆಂದು ಊಹಿಸಲಾಗಿದೆ. ಜವುಳಿ ಜಂಗಮ ಎಂಬುದಾಗಿ ಈ ಜನಾಂಗದ ಹೆಣ್ಣು ಗಂಡುಗಳನ್ನು ಈ ಪ್ರದೇಶದ ಜನ ಗುರುತಿಸಿರಬೇಕು. ಸುಬ್ರಹ್ಮಣ್ಯದ ಹೊಸ ಗೋಳಿ ಮರದಡಿಯಲ್ಲಿ ಚರ್ಮವ್ಯಾಧಿಗಳಿಗೆ ಔಷದಿ ನೀಡುತ್ತಿದ್ದಾರೆ. ಹೊಸ ಗೋಳಿಯನ್ನು-ಹೊಸೊಳಿಗಮ್ಮ ಎಂಬುದಾಗಿ ಪೂಜಿಸಲ್ಪಡುತ್ತಿರುವುದೆಂದು ಐತಿಹ್ಯ ಇದೆ. ಪಾಡ್ದನದಲ್ಲಿ "ಕಿನ್ನರಿ ಹೊಳೆ" ವಾಗಿದ್ದದ್ದು ಇತ್ತೀಚೆಗೆ ಕನ್ನಡಿ ಹೊಳೆ ಎಂದು ಬದಲಾಗಿದೆ. ಸಂಸ್ಕೃತ ಪ್ರಿಯರಿಂದ ದರ್ಪಣ ತೀರ್ಥ ಎಂದು ಕರೆಯಲ್ಪಡುತ್ತದೆ.

[ಆಧಾರ–ಪಾಡ್ದನ ಶಂಕರ ಅಜಿಲ ಕರಾವಳಿ ಜಾನಪದ–ಪುರುಷೋತ್ತಮ ಬಿಳಿಮಲೆ]

● **ಎನ್. ಎಸ್. ದೇವಿಪ್ರಸಾದ್**

ಸಂಗಾತಿ !

ದೇಶದಾದ್ಯಂತ
ಹುಡುಕಿದೆ
ಎಲ್ಲೂ ಸಿಗಲಿಲ್ಲ
ಎನಗೆ ತಕ್ಕ
ಜೊತೆಗಾತಿ
ಸದ್ಯಕ್ಕೆ ನೀನೇ
ಎನ್ನ ಸರ್ವಸ್ವ
ಒಲವಿನ
"ಕೊಡಗು ಸಂಗಾತಿ !"

● **ಶಶಿಪ್ರಿಯ,** ಕೊಳಕೇರಿ.

ನಿಧನ

ಕೊಡಗನ ಚಂದ್ರಮ್ಮ ಎಂ. ರಾಮೇಗೌಡರವರ ಧರ್ಮಪತ್ನಿ ಮೈಸೂರು ಇವರು ದಿ|| 25–9–97ರಂದು ಹೃದಯಘಾತದಿಂದ ದೈವಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರಿಗೆ ನಾಲ್ಕು ಹೆಣ್ಣು ಮಕ್ಕಳು. ಅತೀ ಚಟುವಟಿಕೆಯಿಂದ ಕೂಡಿದ್ದ ನಮ್ಮ ಗೌಡ ಬಂಧುಗಳಲ್ಲಿ ಚಿರಪರಿಚಿತರಾಗಿದ್ದರು. ಮೈಸೂರು ನಗರದ ಸರಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು.

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 1837ರ ಸ್ವಾತಂತ್ರ್ಯ ಸಂಗ್ರಾಮ

(ಹಿಂದಿನ ಸಂಚಿಕೆಯಿಂದ)

ಈ ರಾಜನ ಮೇಲೆ ಹೊರಡಿಸಿದ ಒಂದು ಅಪವಾದವು ಸತ್ಯಕ್ಕೆ ದೂರವಾಗಿದೆ ಎಂದು ಹೇಳುವುದು ನನ್ನ ಕರ್ತವ್ಯವಾಗಿದೆ, ಎಂದು ತಿಳಿಯುತ್ತೇನೆ. ನಾನು ಬೊಂಬಾಯಿಯಿಂದ ಹೊರಡುವ ಮೊದಲು ಕೆಲವು ಜನರು ಕೊಡಗಿಗೆ ಹೋಗಿದ್ದ ತಮ್ಮ ನೆಂಟರಿಷ್ಟರು ರಾಜನಿಂದ ಅನನ್ಯವಾಗಿ ಕೊಲ್ಲಲ್ಪಟ್ಟರೆಂಬ ವರ್ತಮಾನವನ್ನು ಪಡೆದಿದ್ದು ನನ್ನೊಡನೆ ಆ ವರ್ತಮಾನದ ಸತ್ಯಾಂಶವನ್ನು ತಿಳಿಯಬೇಕೆಂದು ಕೇಳಿಕೊಂಡಿದ್ದರು. ನಾನು ಕೊಡಗಿಗೆ ಬಂದ ಮೇಲೆ

ಪೂಜಾರಿ ಪೊಣ್ಣಪ್ಪ, ವಕೀಲರು
ಬೆಂಗಳೂರು

ಈ ವರ್ತಮಾನದ ನಿಜಾಂಶದ ಬಗ್ಗೆ ವಿಚಾರಿಸಿದಾಗ ಯಾರು ರಾಜನಿಂದ ಕೊಲ್ಲಲ್ಪಟ್ಟರುವರೆಂಬ ವರ್ತಮಾನವು ಬೊಂಬಾಯಿಯಲ್ಲಿದ್ದ ಅವರ ಬಂಧುಗಳಿಗೆ ತಿಳಿದಿರುತ್ತೋ ಅದೇ ಜನರು ನನ್ನ ಮುಂದೆ ರಕ್ತ ಮಾಂಸದಿಂದ ಜೀವಂತರಾಗಿ ಬಂದು ಆ ಅಸತ್ಯತೆಯ ವರ್ತಮಾನವನ್ನು ಹೊರಗೆಡಹಿದಾಗ ನನಗೆ ಬಹಳ ಸಂತೋಷವಾಯಿತು" ಎಂಬುದಾಗಿ ಬರೆಯುತ್ತಾರೆ. ಇದರಿಂದ ಚಿಕ್ಕವೀರರಾಜರ ವಿರೋಧವಾಗಿದ್ದವರು ಈ ರೀತಿಯ ಸುಳ್ಳು ಪ್ರಚಾರವನ್ನು ಮಾಡಿ ರಾಜರ ಮೇಲೆ ಬ್ರಿಟೀಷ್ ಅಧಿಕಾರಿಗಳಿಗೂ ಅದರಲ್ಲೂ ಶ್ರೀರಂಗಪಟ್ಟಣದಲ್ಲಿ ಬ್ರಿಟೀಷ್ ರೆಸಿಡೆಂಟರಾಗಿದ್ದ ಕರ್ನಲ್ ಫ್ರೇಜರ್‌ರವರಿಗೆ ರಾಜರ ಮೇಲೆ ಅಸಮಾಧಾನ ತರಲು ಯತ್ನಿಸಿದ್ದು ದೃಢವಾಗಿವೆ.

ಚಿಕ್ಕವೀರರಾಜೇಂದ್ರರ ತಂದೆ ಲಿಂಗರಾಜೇಂದ್ರ ಪಡೆಯರಿಗೆ ಮುದ್ದಮ್ಮಾಜಿ ಮತ್ತು ದೇವಮ್ಮಾಜಿ ಎಂಬ ಇಬ್ಬರು ಹೆಣ್ಣುಮಕ್ಕಳಿದ್ದು ಅವರಲ್ಲಿ ಹಿರಿಯರಾದ ಮುದ್ದಮ್ಮಾಜಿಯನ್ನು ಬೋಂಡದ ಮುಕ್ಕಾಟಿರ ಐಪಣ್ಣನೆಂಬುವರನ್ನು ಲಿಂಗಾಯಿತರನ್ನಾಗಿ ಮಾಡಿ ಲಿಂಗಧಾರಣೆ ಮಾಡಿಸಿ ಚೆನ್ನಬಸಪ್ಪನೆಂದು ಹೆಸರಿಟ್ಟು ಲಿಂಗರಾಜರು ಮದುವೆ ಮಾಡಿದರು. ಆಕೆ ಎರಡು ವರ್ಷದೊಳಗೆ ತೀರಿಹೋಗಲು ಆಕೆಯ ಸ್ವಂತ ತಂಗಿಯಾದ ದೇವಮ್ಮಾಜಿಯನ್ನು ಚೆನ್ನಬಸಪ್ಪನವರಿಗೆ ಮದುವೆ ಮಾಡಿದರು. ದೇವಮ್ಮಾಜಿ ಮತ್ತು ಚೆನ್ನಬಸಪ್ಪನವರಿಗೆ ತಾವೇ ಕೊಡಗಿನ ಸಿಂಹಾಸನವನ್ನು ಏರಬೇಕೆಂಬ ಆಶೆಯುಂಟಾದುದರಿಂದ ಚಿಕ್ಕವೀರ ರಾಜೇಂದ್ರರ ಮೇಲೆ ಇಂಗ್ಲೀಷರಿಗೆ ದೂರನ್ನು ಕೊಟ್ಟು ಅವರಿಬ್ಬರು ಕೊಡಗಿನಿಂದ ತಪ್ಪಿಸಿಕೊಂಡು ಹೋಗಿ ಬ್ರಿಟೀಷ್ ರೆಸಿಡೆಂಟರ ಆಶ್ರಯ ಪಡೆದರು. ಬ್ರಿಟೀಷರು ಕೊಡಗನ್ನು ವಶಪಡಿಸಿಕೊಂಡು ಕೊಡಗನ್ನು ತಮಗೆ ಕೊಡಿಸಿ ಕೊಡಬೇಕೆಂದು ಬ್ರಿಟೀಷರೊಡನೆ ಪಿತೂರಿ ನಡೆಸಿದರು. ಈ ಪಿತೂರಿಗೆ ಕೊಡಗಿನ ಕೆಲವು ಮುಖಂಡರೂ ಸೇರಿದ್ದರು.

ಚೆನ್ನಬಸಪ್ಪನವರು ತನ್ನ ಹೆಂಡತಿ ದೇವಮ್ಮಾಜಿಯನ್ನು ರಾಜರು ಮೋಹಿಸಿದರೆಂಬ ಆರೋಪವನ್ನೂ ಉಂಟುಮಾಡಿದರು. ಇದಕ್ಕೆ ಕಾರಣ ಚೆನ್ನಬಸಪ್ಪನವರಿಗೆ ಚಿಕ್ಕವೀರರಾಜೇಂದ್ರರು ಪಟ್ಟವೇರುವುದು ಹಿಡಿಸಲಿಲ್ಲವೆಂದು ತೋರುತ್ತದೆ. ಅವರು ರಾಜರಲ್ಲಿಗೆ ಹೋಗುತ್ತಿರಲಿಲ್ಲ. ರಾಜರೊಡನೆ ವಿನಯ ಭಾವದಿಂದ ನಡೆದುಕೊಳ್ಳುತ್ತಿರಲಿಲ್ಲ. ಆದ್ದರಿಂದ ರಾಜರು ಒಂದುಬಾರಿ ತಮ್ಮ ಬಳಿಗೆ ಬಂದ ತಂಗಿ ದೇವಮ್ಮಾಜಿಯನ್ನು ಒಂದೆರಡು ವರ್ಷಗಳವರೆಗೆ ತಮ್ಮ ಬಳಿಯೇ ಇರಿಸಿಕೊಂಡಿದ್ದರು. ಈ ಕಾರಣದಿಂದ ಮೇಲಿನ ಅಪವಾದವನ್ನು ಮಾಡುವುದಕ್ಕೆ ಕಾರಣವಾಯಿತು. ಮೇಲಿನ ಅಪವಾದದಲ್ಲಿ ಸತ್ಯಾಂಶವಿಲ್ಲ. ಚೆನ್ನಬಸಪ್ಪ ಮತ್ತು ದೇವಮ್ಮಾಜಿಯವರು ಅಪ್ಪಂಗಳದಿಂದ ರಾತ್ರೋರಾತ್ರಿ ಮೈಸೂರು ರಾಜ್ಯಕ್ಕೆ ಪಲಾಯನ ಮಾಡಿದರು. ಈ ರೀತಿ ಪಲಾಯನ ಮಾಡಿ ಬ್ರಿಟೀಷರಿಗೆ ವೀರರಾಜರ ಮೇಲೆ ಅಪವಾದ ಹೊರಿಸಿ ಬ್ರಿಟೀಷರು ಕೊಡಗನ್ನು ಸೈನ್ಯದೊಡನೆ ಪ್ರವೇಶಿಸುವಂತೆ ಮಾಡಿದರು.

ಈ ಸಮಯದಲ್ಲಿ ಚಿಕ್ಕವೀರರಾಜೇಂದ್ರ ಪಡೆಯರು ನಾಲ್ಕು ನಾಡಿನ ಅರಮನೆಯಲ್ಲಿ ಇದ್ದರು. ಬ್ರಿಟೀಷ್ ಸೈನ್ಯವು ಕೊಡಗಿನ ನಾಲ್ಕು ಕಡೆಯಿಂದ ಮುತ್ತಿತು. ಉತ್ತರ ದಕ್ಷಿಣ ಮತ್ತು ಪಶ್ಚಿಮದ ಕಡೆಯಿಂದ ನುಗ್ಗುತ್ತಿದ್ದ ಸೈನ್ಯಗಳನ್ನು ಕೊಡಗಿನ ವೀರರು ಹಿಮ್ಮೆಟ್ಟಿಸಿದರು ಆದರೆ ಪೂರ್ವ ದಿಕ್ಕಿನಿಂದ ಹೆಬ್ಬಾಲೆಯ ಹತ್ತಿರ ಕಾವೇರಿ ನದಿಯನ್ನು ದಾಟ ಬರುತ್ತಿದ್ದ ಸೈನ್ಯವನ್ನು ಎದುರಿಸಲು ರಾಜರು ಅಪ್ಪಾರಂಡ ಬೋಪು ದಿವಾನರ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿದರು. ಬೋಪು ದಿವಾನರು ಯುದ್ಧ ಮಾಡುವ ಬದಲು ಬಿಳಿಧ್ವಜವನ್ನು ತೋರಿಸಿ ಕುಶಾಲ್ ನಗರದಲ್ಲಿ ಶರಣಾಗತರಾದರು. ಬೋಪು ದಿವಾನರು ಈ ಮೊದಲೇ ಬ್ರಿಟೀಷರಿಗೆ ಶರಣಾಗತನಾಗುವುದೇ ಲೇಸೆಂದು ರಾಜರಿಗೆ ಹೇಳುತ್ತಾ ಇದ್ದರು.

ಸೈನ್ಯದ ಜೊತೆಯಲ್ಲಿದ್ದ ಕರ್ನಲ್ ಫ್ರೇಜರರು ಮಡಿಕೇರಿಗೆ ಬಂದು ಮಡಿಕೇರಿ ಕೋಟೆಯ ಮೇಲೆ ಹಾರುತ್ತಿದ್ದ ಕೊಡಗು ರಾಜರ ಧ್ವಜವನ್ನು ಕೆಳಗಿಳಿಸಿ ಬ್ರಿಟೀಷ್ ಧ್ವಜವನ್ನು ಮೇಲಕ್ಕೇರಿಸಿದರು. ಕರ್ನಲ್ ಫ್ರೇಜರ್‌ರವರು ಚಿಕ್ಕವೀರರಾಜೇಂದ್ರರನ್ನು ನಾಲ್ಕು ನಾಡಿನ ಅರಮನೆಯಲ್ಲಿ ಬಂಧಿಸಿ ಮಡಿಕೇರಿ ಅರಮನೆಯಲ್ಲಿ ಕೈದಿಯಾಗಿ ಇಟ್ಟರು.

ಕೊಡಗಿನ ಆಡಳಿತದ ಜವಾಬ್ದಾರಿಯನ್ನು ಕ್ಯಾಪ್ಟನ್ ಲೀಹಾರ್ಡಿಗೆ ವಹಿಸಿ ಶ್ರೀರಂಗಪಟ್ಟಣಕ್ಕೆ ಹಿಂತಿರುಗಿದರು.

(ಮುಂದುವರಿಯುವುದು)

ಯಾರನ್ನು ಬೇಡುವುದು

ಬೇಡಿಕೆ ಹೆಚ್ಚಿದಂತೆ ಬೇಡುವುದು ಹೆಚ್ಚುತ್ತದೆ. ಬೇಡಿಕೆ, ಬೇಡುವುದು ಸಂಸಾರದಲ್ಲಿ ಇದ್ದದ್ದೇ. ಬೇಡುವುದು ಸುಲಭ, ಕೊಡುವುದು ಕಠಿಣ. ಹಾಗಾದರೆ ಬೇಡುವುದು ಯಾರನ್ನು ? ಇಲ್ಲಿಯೇ ನಾವು ದಾರಿ ತಪ್ಪುವುದು. ಬೇಡದವರು ಯಾರು ? ರಾಜನೂ ಬೇಡುತ್ತಾನೆ. ಭಿಕ್ಷುಕನೂ ಬೇಡುತ್ತಾನೆ. ನಮ್ಮ ಸರಕಾರವಂತೂ ಬೇಡುವುದನ್ನೇ ಸರಕಾರಿ ಕರ್ತವ್ಯವೆಂದು ತಿಳಿದಿದೆ.

ಬೇಡುವುದು ಯಾಕೆ ? ನಮ್ಮ ಜೀವನ ಸುಗಮವಾಗುವುದಕ್ಕೆ. ಇದು ಸ್ವಾರ್ಥ, ಸದಾ ವ್ಯರ್ಥ. ನಮ್ಮ ಉದ್ಧಾರ ನಮ್ಮ ಸಮಾಜದ ಉದ್ಧಾರದಲ್ಲಿದೆ. ನಮಗಿಂತ ಪವಿತ್ರತೆ ನಮ್ಮ ಸಮಾಜ. ಸಮಾಜವನ್ನು ಉದ್ಧರಿಸದಿದ್ದರೆ ನಮ್ಮ ಸಮಾಧಿಯನ್ನು ನಾವೇ ಹುಡುಕುವಂತಾಗುವುದು. ಸುಖ, ಶಾಂತಿಗೆ ಒಂದೇ ಮಾರ್ಗ ಜನಸೇವೆ. ಸಮಾಜ ಸೇವೆ. ಹೃದಯಾನಂದ ಪಡೆಯಬೇಕಾದರೆ ಹರಿನಾಮವೇ ಏಕೈಕ ಮಾರ್ಗ. ಜೀವನದಲ್ಲಿ ಸುಯೋಗ, ಸಂಯೋಗ ಪಡೆಯುವ ಮಾರ್ಗ ಜಪ ಮತ್ತು ಧ್ಯಾನ. ಪ್ರಜ್ಞಾನಕ್ಕೆ ಪ್ರಭು ದರ್ಶನವೇ ಗತಿ. ಸತ್ಯ ಧರ್ಮ ನಮ್ಮಲ್ಲಿರಬೇಕಾದರೆ ದಯೆ, ಧರ್ಮ ಇರಲೇಬೇಕು. ಹರಿನಾಮವಿಲ್ಲದೆ ಪರಮಾತ್ಮನಿಲ್ಲ, ನಾವು ಅನಾಥರಲ್ಲ. ನಮಗೆ ನಾಥ ಭಗವಂತ. ಭಗವಂತನೇ ನಮ್ಮ ಪ್ರಾಣ ಸ್ನೇಹಿತ. ನಮ್ಮನ್ನು ಕಾಪಾಡುವ ಶಕ್ತಿ ಭಗವಂತನಿಗೆ ಮಾತ್ರವಿದೆ. ಅಂದ ಮೇಲೆ ಇತರರನ್ನು ಏಕೆ ಬೇಡಬೇಕು. ಭಗವಂತನನ್ನೇ ಬೇಡುವುದು ಸೂಕ್ತ.

ಬೇಡಿದುದಕ್ಕೆ ಭಗವಂತ ಕೊಡುವನೇ? ಇಲ್ಲ, ಮೈಮುರಿದು ದುಡಿಯಬೇಕು. ಹೃದಯದಲ್ಲಿ ಭಗವಂತನ ಭಾವನೆ ಇರಬೇಕು. ನಾಲಿಗೆಯಲ್ಲಿ ಅವನ ನಾಮವಿರಬೇಕು. ಕೈಯಲ್ಲಿ ಕೆಲಸ ಕಾರ್ಯಗಳಿರಬೇಕು. ಇವು ಮೂರನ್ನು ಸತ್ಯ, ಧರ್ಮದಲ್ಲಿ ನಡೆಸಿಕೊಂಡು ಕಾರ್ಯಕ್ಕಿಳಿಯುವುದೇ ಭಗವಂತನಲ್ಲಿ ಬೇಡುವುದು.

ಬೇಡಿ ಬಿಡಲಿಕ್ಕಾಗದು. ಬೇಡಿದ್ದನ್ನು ನೀಡಬೇಕು. ಯಾರಿಗೆ ನೀಡಬೇಕು ? ಸಮಾಜಕ್ಕೆ ನೀಡಬೇಕು. ಸಮಾಜದ ಕುಂದು ಕೊರತೆಯನ್ನು ನೀಗಿಸಲು ನಮ್ಮ ಅಳಿಲು ಸೇವೆ ಮಾಡಿಯೇ ತೀರಬೇಕು. ತಾಯಿಯ ಋಣ, ದೇಶದ ಋಣ, ಸಮಾಜದ ಋಣ ತೀರಿಸಲು ಒಂದು ಜನ್ಮ ಸಾಕಾಗುವುದಿಲ್ಲ. ಹಾಗೆಂದು ಬಿಡುವ ಹಾಗಿಲ್ಲ. ಮುಂದಿನ ಪೀಳಿಗೆಯ ಉದ್ಧಾರಕ್ಕೆ ನಮ್ಮ ಉದ್ಧಾರಕ್ಕೆ, ನಮ್ಮ ಜಾತಿಯ ಉದ್ಧಾರಕ್ಕೆ ನಾವು ಕಾಡಿ, ಬೇಡಿ, ಸಂಪಾದಿಸಿ ನಮ್ಮ ಸಮಾಜವನ್ನು ನಾವೇ ಉದ್ಧರಿಸಬೇಕು. ಇದು ಎಲ್ಲರ ಕರ್ತವ್ಯ. ಸ್ವಾರ್ಥಕ್ಕೆ ಕಡಿವಾಣ ಹಾಕಿ ಸಮಾಜವನ್ನು ಕಟ್ಟುವ. ●

ಸಿ. ಜಿ. ಮುತ್ತಪ್ಪ, ಕುಶಾಲನಗರ

ಇದು ನಿಮಗೆ ತಿಳಿದಿರಲಿ

1. ಪ್ರಪಂಚದಲ್ಲಿ ಅತಿ ಚಿಕ್ಕ ಪಕ್ಷಿ–"ಹಮ್ಮಿಂಗ್" ಕ್ಯೂಬಾ ದೇಶದಲ್ಲಿದೆ.
2. ಸೊಳ್ಳೆ ಇಲ್ಲದ ದೇಶ–ಫ್ರಾನ್ಸ್.
3. ಹೊಗೆಸೊಪ್ಪು ತಿನ್ನುವುದನ್ನು ನಿಲ್ಲಿಸಿದ ರಾಜ –ಪೀಟರ್ ದಿ ಗ್ರೇಟ್ ರಶಿಯಾ.
4. ಪ್ರಪಂಚದಲ್ಲಿಯೇ ಉದ್ದ ಇರುವ ಬಸ್–ಅಮೇರಿಕಾ 76 ಅಡಿ ಉದ್ದ.
5. ವಿಶ್ವದಲ್ಲಿ ದಿವಸ ಬಣ್ಣ ಬಣ್ಣವಾಗಿ ಕಾಣುವ ಬೆಟ್ಟ –ದಕ್ಷಿಣ ಆಸ್ಟ್ರೇಲಿಯಾದ ಆಯಿರ್ಸರಾಕ.
6. ಪ್ರಪಂಚದಲ್ಲಿ ಎಲ್ಲಾ ತರದ ಭಾಷೆಗಳು–2792.
7. ಪ್ರಪಂಚದಲ್ಲಿ ಮೀನು ಇಲ್ಲದ ಜಾಗ–"ಜಾರ್ಡನ್ ಹೊಳೆ" ಎಲಿಸ್ತಿನ್‌ನಲ್ಲಿದೆ.
8. ಪ್ರಪಂಚದಲ್ಲಿ ಎತ್ತರವಾಗಿ ಇರುವ ಹೆಣ್ಣು –ಮಧ್ಯ ಚೀನಾದ ಸಾನಚುಂಗಲಿಂಗ. 8 ಅಡಿ, 1 ಇಂಚು.
9. ಪ್ರಪಂಚದಲ್ಲಿ ತುಂಬಾ ಎತ್ತರವಾಗಿ ಇರುವ ಗಂಡು –ಪಾಕಿಸ್ತಾನದ ಆಲಮುಚೆನ್ನಾ.
10. ಪ್ರಪಂಚದಲ್ಲಿ ಹೆಸರುವಾಸಿಯಾಗಿರುವ ಬೆಟ್ಟ ಮೌಂಟ್ ಎವರೆಸ್ಟ್.

● ಸಂಗ್ರಹ : **ಅಪ್ಪೆಯಂಡ್ರ ಮಣಿ ಮುತ್ತಪ್ಪ,**
ಕಟ್ಟೆಮಾಡು.

ಕೊಡಗು ಸಂಗಾತಿ ಪತ್ರಿಕೆನ

ಕೊಂಡು ಓದಿ

ಕಾವೇರಿ ಸಂಕ್ರಮಣ

ಈ ಬಾರಿ ಅಕ್ಟೋಬರ್ 17ರ ಸಂಜೆ 6-25ಕ್ಕೆ ತಲಕಾವೇರಿಯ ಬ್ರಹ್ಮಕುಂಡಿಕೆಯಲ್ಲಿ ಪುಣ್ಯ ತೀರ್ಥೋದ್ಭವ ನಡೆಯಲಿದೆ. ಈ ಸಂದರ್ಭದಲ್ಲಿ ಇದೊಂದು ಕಿರುಲೇಖನ.

ಅಕ್ಟೋಬರ್ 17ರಂದು ಭಾಗಮಂಡಲ ಮತ್ತು ತಲಕಾವೇರಿಯಲ್ಲಿ ಜಾತ್ರೆಯ ಸಂಭ್ರಮವಾದರೆ, ಇಡೀ ಕೊಡಗಿನಲ್ಲಿ ಹಬ್ಬದ ವಾತಾವರಣ. ಆ ದಿನ ಭಾಗಮಂಡಲದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ತೀರಿಕೊಂಡವರಿಗಾಗಿ ತ್ರಿವೇಣಿ ಸಂಗಮದಲ್ಲಿ 'ಪಿಂಡ ಹಾಕುವ' ಕ್ರಿಯೆ ಮಾಡಿ, ಕಾವೇರಿ, ಕನ್ನಿಕಾ, ಸುಜ್ಯೋತಿಯರ ಪುಣ್ಯವಾಹಿನಿಯಲ್ಲಿ ಮಿಂದು, ತಮ್ಮ ಪಾಪವನ್ನು ಪರಿಹರಿಸಿಕೊಳ್ಳುತ್ತಾರೆ. ನಂತರ ವಿನಾಯಕ, ಭಗಂಡೇಶ್ವರ, ಮಹಾವಿಷ್ಣು ಸುಬ್ರಹ್ಮಣ್ಯರಿಗೆ ಪೂಜೆಯನ್ನು ಸಲ್ಲಿಸಿ ತಲಕಾವೇರಿಗೆ ತಮ್ಮ ಯಾತ್ರೆ ಮುಂದುವರೆಸುತ್ತಾರೆ. ಆ ದಿನ ಭಕ್ತಾದಿಗಳಿಗೆ ಹೇಗೆ ಪುಣ್ಯದಿನವೋ ಹಾಗೆಯೇ ವ್ಯಾಪಾರಿಗಳಿಗೆ ಬಿಡುವಿಲ್ಲದ ವಹಿವಾಟು. ಸರಕಾರದ ವಿವಿಧ ಇಲಾಖೆಗಳಿಗೆ ತಮ್ಮ ತಮ್ಮ ಇಲಾಖೆಯ ಯೋಜನೆ ಸಂದೇಶ, ಧ್ಯೇಯ ಮತ್ತು ಸಾಧನೆಗಳನ್ನು ಸಾರ್ವಜನಿಕರಿಗೆ ತಿಳಿಯಪಡಿಸುವುದಕ್ಕೆ ಒಂದು ಸೂಕ್ತ ವೇದಿಕೆ.

ಪೊನ್ನೇಟಿ ಬಿ. ಸುನಿಲ್
ಭಾಗಮಂಡಲ.

ಅಂದು ತಲಕಾವೇರಿಯಲ್ಲಿ ಕಾವೇರಿ ಮಾತೆಯು ತೀರ್ಥರೂಪದಲ್ಲಿ ದರ್ಶನ ನೀಡುವ ಶುಭದಿನ. ಆ ದಿನ ಸೂರ್ಯನು ತುಲಾರಾಶಿಗೆ ಪ್ರವೇಶಿಸುವ ಶುಭಗಳಿಗೆಯಲ್ಲಿ ಬ್ರಹ್ಮಕುಂಡಿಕೆಯಲ್ಲಿಯ ತೀರ್ಥವು ತನ್ನ ಸಾಮಾನ್ಯ ಮಟ್ಟಕ್ಕಿಂತ [ಕುದಿಯುವಾಗ, ಹಾಲು ಉಕ್ಕಿ ಹೇಗೆ ಮೇಲಕ್ಕೆ ಬರುವುದೋ ಹಾಗೆ] ಸ್ವಲ್ಪ ಮೇಲೆ ಬರುತ್ತದೆ. ಈ ವೈಜ್ಞಾನಿಕತೆಗೆ ನಿಲುಕದಂತಹ ದೈವೀ ಕ್ರಿಯೆಯ ವೀಕ್ಷಣೆಗೆ ಸಾವಿರಾರು ಭಕ್ತರು ಸ್ನಾನದ ಕೊಳದಲ್ಲಿ, ಬ್ರಹ್ಮಗಿರಿ ಬೆಟ್ಟದಲ್ಲಿ ಸುತ್ತಮುತ್ತಲಿನ ಕಟ್ಟಡದಲ್ಲಿ ಗಾಳಿಗೆ ಕದಲದೆ, ಮಳೆಗೆ ಬೆದರದೆ, ಚಳಿಗೆ ಮುದುಡದೆ ಭಯ ಭಕ್ತಿಯಿಂದ ಕುಳಿತು, ನಿಂತು ಕಾಯುತ್ತಿರುತ್ತಾರೆ.

ಕೊಡಗಿನ ಜಿಲ್ಲಾಡಳಿತ ಉಸ್ತುವಾರಿಕೆ ಭಕ್ತಾದಿಗಳ ಅನುಕೂಲತೆಗಾಗಿ ಅನೇಕ ತಾತ್ಕಾಲಿಕ ಯೋಜನೆಗಳನ್ನು ರೂಪಿಸಿರುತ್ತದೆ. ಆರೋಗ್ಯ ಇಲಾಖೆ, ಆರಕ್ಷಕ ಇಲಾಖೆ, ಸದಾ ಕ್ರಿಯಾಶೀಲವಾಗಿರುತ್ತದೆ. ಭಾಗಮಂಡಲದಲ್ಲಿ ಹಿಂದೂ ಜಾಗರಣ ವೇದಿಕೆಯಿಂದಲೂ, ತಲಕಾವೇರಿಯಲ್ಲಿ ಚೆಟ್ಟಿಯಾರ್ ಕುಟುಂಬಸ್ಥರಿಂದ ಮತ್ತು ಕೊಡಗು ಏಕೀಕರಣ ರಂಗದ ವತಿಯಿಂದ ಅನ್ನದಾನದ ವ್ಯವಸ್ಥೆ ಇರುತ್ತದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಅನೇಕ ವಿಶೇಷ ಬಸ್ಸುಗಳ ಓಡಾಟದ ವ್ಯವಸ್ಥೆ ಮಾಡಿರುತ್ತದೆ. ಖಾಸಗಿಯವರು ಕೂಡ ತಾತ್ಕಾಲಿಕವಾಗಿ ಹೆಚ್ಚಿನ ಬಸ್ಸುಗಳ ಸೇವೆಯನ್ನು ಕಲ್ಪಿಸುತ್ತಾರೆ. ●

ಗಾದೆ ಮಾತುಗಳು

1. ಅಡಿಯ ಮುಂದಿದೆ ಸ್ವರ್ಗ. ಅಡಿಯ ಹಿಂದಿದೆ ನರಕ
   [ಸಾಹಸದಿಂದ ಮುನ್ನುಗ್ಗಿದರೆ ಮನುಷ್ಯ ಯಶಸ್ವಿ ಆಗುತ್ತಾನೆ.]
2. ಅರಿಯೆ ಅನ್ನುವುದನ್ನು ಆನೆ ಕೊಟ್ಟಾದರೂ ಕಲಿ.
3. ಒಂದು ಅಗಳು ಹಿಸುಕಿ ನೋಡಿದರೆ ಅನ್ನವಾದದ್ದು ತಿಳಿಯುವುದು.
4. ಒಡೆದರೆ ಮುತ್ತು ಹೋಯಿತು, ಆಡಿದರೆ ಮಾತು ಹೋಯಿತು
   [ಎರಡು ತಿರುಗಿ ಬಾರವು ನಂತರ ಉಳಿಯುವುದು ಪಶ್ಚಾತ್ತಾಪವೊಂದೆ]
5. ಮೆತ್ತಗಿನ ನೆಲವಿದ್ದರೆ ಮೊಳ ಕೈಯಿಂದ ಅಗೆದರಂತೆ
   [ಕಬ್ಬು ಸಿಹಿಯೆಂದು ಬೇರು ಸಹಿತ ತಿಂದರಂತೆ]
6. ಮಲ್ಲಿಗೆ ಹೂವಿನಿಂದ ಬಾಳೇ ನಾರು ಪಾವನವಾಯಿತು.
   [ಒಳ್ಳೆಯವರ ಸಂಗದಿಂದ ಸಿಕ್ಕುವ ಉತ್ತಮ ಫಲ]
7. ಬುದ್ಧಿ ಹೇಳಿದವರ ಸಂಗಡ ಗುದ್ದಾಟಕ್ಕೆ ಹೋದ ಹಾಗೆ.
8. ನಿಯಮವುಳ್ಳವನನ್ನು ಕಂಡರೆ ಯಮನಿಗೂ ಭಯವಂತೆ.
9. ಕೆಟ್ಟು ನೆಂಟರ ಸೇರಬೇಡ, ಕೊಟ್ಟ ಧರ್ಮ ತಿರುಗಿ ಕೇಳಬೇಡ.
10. ದೇಶ ತಿರುಗಬೇಕು, ಕೋಶ ಓದಬೇಕು.
11. ನಾಲಿಗೆ ಒಳ್ಳೆಯದಾದರೆ. ನಾಡೆಲ್ಲ ಒಳ್ಳೆಯದು.

ಮುಕ್ಕಾಟಿ ಲತಾ ತಿಮ್ಮಯ್ಯ, ಮೈಸೂರು.

ಗಂಗರಸರ ರಾಜಧಾನಿ ತಲಕಾಡು

[ಹಿಂದಿನ ಸಂಚಿಕೆಯಿಂದ]

ಲೇಖಕರು : ಟಿ. ಆರ್. ಮುದ್ದೇಗೌಡ
ತಲಕಾಡು

ಈಗಲೂ ಇವರು ವಾಸಿಸುವ ಬೀದಿಗಳಿಗೆ ಗ್ರಾಮ್ಯ ಭಾಷೆಯಲ್ಲಿ ಕೊಂಗಣ ವರ್ಮನ ಬೀದಿಯ ಬದಲು ಕೊಂಗೇರಿ ಎಂದು ಎಲ್ಲ ಜನಾಂಗದವರು ಕರೆಯುತ್ತಿರುತ್ತಾರೆ. ಇವರ ಪೂರ್ವಜರು ಕೊಂಗು ದೇಶದ ಮೇಲೆ ಯುದ್ಧವನ್ನು ಮಾಡಿ ಗೆದ್ದುದರಿಂದ ಬಹುಶಃ ಇವರಿಗೆ ಕೊಂಗುಣಿ ಎಂಬ ಬಿರುದು ಬಂದಿದೆ ಎಂದು ಅವರ ಉತ್ತರಾಧಿಕಾರಿಗಳು ಶಿಲಾಶಾಸನದಲ್ಲಿ ನಮೂದಿಸಿರುತ್ತಾರೆ.

ತಮಿಳು ಭಾಷೆಯಲ್ಲಿರುವ 'ಕೊಂಗಣಿ ದೇಶದ ರಾಜಕಲ್' ಎಂಬ ಗ್ರಂಥದಲ್ಲಿ ಕೊಂಗು ಎಂಬುದು ದೇಶ, ಕೊಂಗಣಿ ಎಂಬುದು ಬಿರುದು ಎಂದು ನಮೂದಾಗಿರುತ್ತದೆ. ಹಾಗೂ ಈ ಒಕ್ಕಲಿಗರ ಜನಾಂಗಕ್ಕೆ ಬಲ್ಲಾಳ ಒಕ್ಕಲಿಗ ರೆಡ್ಡಿಕುಲ ಒಕ್ಕಲಿಗ ಎಂದು ಕರೆಯುವುದು ರೂಢಿಯಾಗಿದೆ. ಇವರ ಲಾಂಛನವು ಮದಗಜವಾಗಿರುತ್ತದೆ. ಈಗಲೂ ಕುದುರೆಲಾಯಗಳಿದ್ದ ಪ್ರದೇಶಕ್ಕೆ ಗ್ರಾಮ್ಯ ಭಾಷೆಯಲ್ಲಿ ಕುದುರೆ ಮಾಳವೆಂದು ಕರೆಯುತ್ತಿರುತ್ತಾರೆ.

ರಕ್ತ ಸಂಬಂಧಗಳು

ಕೊಂಗುಣಿಗಳು ಹಿಂದಿನಿಂದಲೂ ಕದಂಬರು, ರಾಷ್ಟ್ರಕೂಟರು, ಕಂಚಿಪಲ್ಲವರು, ಚಾಲುಕ್ಯರು, ನೊಳಂಬರು, [ಒಕ್ಕಲಿಗರ ಒಳಪಂಗಡ] ಬಾಣರು, ಪಾಂಡ್ಯರು ಮತ್ತು ರಟ್ಟರು [ರಾಷ್ಟ್ರಕೂಟರು] [ಈಗಿನ ರೆಡ್ಡಿ ಒಕ್ಕಲಿಗರು] ಮರಸುನಾಡಿನವರ [ಅಂದರೆ ಈಗಿನ ಕೋಲಾರ ಜಿಲ್ಲೆಯ ಮರಸು ಒಕ್ಕಲಿಗ] ಜೊತೆಯಲ್ಲಿ ರಕ್ತ ಸಂಬಂಧ ವಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. [ಮುಂದುವರಿಯುವುದು]

ಭಾಷೆ, ಸಂಸ್ಕೃತಿಯನ್ನು ಪೋಷಿಸಿ, ಬೆಳೆಸಿ-ಉಳಿಸಿ

ಪಡಿಕಲ್ ಪುಷ್ಪಾ ಮಾಚಯ್ಯ,
ಬೆಂಗಳೂರು.

ಸಂಸ್ಕೃತಿ ಭಾಷೆ ಇವು ಮಾನವ ಸಮಾಜದ ಒಂದು ಸರ್ವವ್ಯಾಪ್ತಿ ಹಾಗೂ ನಿರಂತರವಾದ ವ್ಯವಸ್ಥೆಯಾಗಿದೆ. ಇದರ ಆಧಾರದ ಮೇಲೆ ಇಂದು ನಾವು ಒಂದು ನಿರ್ದಿಷ್ಟವಾದ ಜನಾಂಗಗಳನ್ನು ಗುರುತಿಸುತ್ತಿದ್ದೇವೆ. ಈ ಭಾಷೆ, ಸಂಸ್ಕೃತಿಯನ್ನು ಸರಿಯಾಗಿ ಪೋಷಿಸಿಕೊಂಡು ಹೋದರೆನೇ ಅದು ನಮ್ಮ ಮುಂದಿನ ಜನಾಂಗಕ್ಕೆ ಉಳಿಯುವುದು. ಹಾಗೇ ನಮ್ಮ ಗೌಡ ಜನಾಂಗಕ್ಕೆಂದೇ ಒಂದು ನಿರ್ದಿಷ್ಟವಾದ ಭಾಷೆ, ಸಂಸ್ಕೃತಿಯಿದೆ. ಇದರ ಆಧಾರದ ಮೇಲೆ ಇಂದು ನಾವು ಸಮಾಜದಲ್ಲಿ ಗೌಡರು ಎಂದು ಗುರುತಿಸಿಕೊಳ್ಳುತ್ತಿದ್ದೇವೆ. ಇವನ್ನು ನಮ್ಮ ಪೂರ್ವಜರು ಪಾಲಿಸಿ, ಪೋಷಿಸಿ, ಉಳಿಸದೆ ಹೋಗಿದಿದ್ದರೆ ಇಂದು ನಾವು ಹೇಳಿಕೊಳ್ಳಲು ಅರೆಭಾಷೆ ಇರುತ್ತಿರಲಿಲ್ಲ. ನಮ್ಮ ಸಂಸ್ಕೃತಿಯೂ ಉಳಿಯುತ್ತಿರಲಿಲ್ಲ. ಇದನ್ನು ಅಳಿಸದೆ, ಮೂಲೆ ಗುಂಪಾಗಿಸದೆ, ಕಾಪಾಡಿಕೊಂಡು ಮುಂದಿನ ಜನಾಂಗಕ್ಕೆ ಉಳಿಸುವುದು ನಮ್ಮ ಈಗಿನ ಗೌಡ ಜನಾಂಗದ ಕರ್ತವ್ಯವಾಗಿದೆ. ಈ ಮಾತನ್ನು ನಾನು ಇಲ್ಲಿ ಏಕೆ ಪ್ರಸ್ತಾಪಿಸುತ್ತಿದ್ದೇನೆಂದರೆ, ಇಂದು ನಮ್ಮ ಅರೆಭಾಷೆ ಮಾತನಾಡುವವರ ಸಂಖ್ಯೆ ನಶಿಸುತ್ತಾ ಬಂದಿದೆ. ಇದನ್ನು ಮಾತನಾಡಿದರೆ, ಅವಮಾನ ಎಂದು ಕೆಲವರು ಭಾವಿಸಿದ್ದಾರೆ. 'ಎಂತ ದಪ್ಪ ನಮ್ಮ ಭಾಷೆ ಸ್ವಲ್ಪನೂ ಲಾಯ್ಕಿಲ್ಲೆ' ಎಂದು ನಮ್ಮವರೇ ನಮ್ಮ ಭಾಷೆಯನ್ನು ಕೀಳಾಗಿ ಕಾಣುವ ಪರಿಸ್ಥಿತಿ ಬಂದಿದೆ. ಇನ್ನೂ ಒಂದು ಹೇಳುವುದೇನೆಂದರೆ, ಈಗಿನ ತಂದೆ ತಾಯಿಗಳು ತಮ್ಮ ಮಕ್ಕಳನ್ನು ಅರೆಭಾಷೆಯಿಂದ ಮಾರು ದೂರದಲ್ಲಿಟ್ಟಿದ್ದಾರೆ. ಮಕ್ಕಳಿಗೆ ಅರೆಭಾಷೆಯ ಗಂಧವೇ ಇರುವುದಿಲ್ಲ. ಅದರಲ್ಲಿ ಹೆಚ್ಚಾಗಿ ಪಟ್ಟಣಗಳಲ್ಲಿ ವಾಸಮಾಡುವವರು "ಅಯ್ಯೋ ನಮ್ಮ ಮಕ್ಕಳಿಗೆ ಅರೆಭಾಷೆ ಕಲ್ಸಿದ್ಲೆಪ್ಪ. ಅದನ್ನ ಮಾತಾಡಿಕೆ ನಾಚಿಕೆ ಆದ್" ಎಂದು ಹೇಳುತ್ತಾರೆ. ನಮ್ಮ ಜನಾಂಗಕ್ಕೆಂದೇ ಇರುವ ನಮ್ಮ ಭಾಷೆಯನ್ನು ಮಾತನಾಡಲು ಏಕೆ ನಮಗೆ ನಾಚಿಕೆ ಆಗಬೇಕು ? ಅರೆಗನ್ನಡ ಗೌಡ ಜನಾಂಗದಲ್ಲಿ ಹುಟ್ಟಿದ್ದೇವೆ. ಆದರೆ ಆ ಭಾಷೆ ಬೇಡ ಎಂದರೆ ಹೇಗೆ ಹೇಳಿ. ಇದರಿಂದ ನಷ್ಟ ಗೌಡ ಜನಾಂಗಕ್ಕೆ ತಾನೆ ? ಇನ್ನು ಒಂದು ಹೇಳುವುದೇನೆಂದರೆ, ಈಗಿನ faction ಯುಗದಲ್ಲಿ ಮದುವೆ ಮುಂತಾದ ಸಮಾರಂಭಗಳು ಸಹ ಒಂದು faction ಆಗಿ ಹೋಗಿದೆ. ಮದುವೆಯಲ್ಲಿ ಶಾಸ್ತ್ರ ಸಂಪ್ರದಾಯಗಳೇ ಕಡಿಮೆಯಾಗುತ್ತಾ ಬಂದಿದೆ. ಆಡಂಬರ ಜಾಸ್ತಿಯಾಗಿದೆ. ಆದ್ದರಿಂದ ನಮ್ಮ ಸಹಸ್ರ ಗೌಡ ಬಾಂಧವರಲ್ಲಿ ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ನಮ್ಮ ಭಾಷೆ, ಸಂಸ್ಕೃತಿಯನ್ನು ಮೂಲೆ ಗುಂಪು ಮಾಡದೆ, ಪೋಷಿಸಿ ಬೆಳೆಸಿ ಸಮಾಜದಲ್ಲಿ ನಾವು ಗೌಡರು ಎಂದು ಗುರುತಿಸಿಕೊಳ್ಳಿ. ●

ಪ್ರತಿಭಾವಂತ ಗೌಡ ಮಕ್ಕಳಿಗೆ ಪುರಸ್ಕಾರ /ಪ್ರತಿಭೆಗಳಿಗೆ ಸನ್ಮಾನ/ಮುಖ್ಯದ್ವಾರ ಗೇಟಿನ ಉದ್ಘಾಟನೆ/ಕೊಳವೆ ಬಾವಿಯ ಚಾಲನೆ

ದಿನಾಂಕ 14-9-1997 ರಲ್ಲಿ ಕೊಡಗು ಗೌಡ ವಿದ್ಯಾಸಂಘ, ಮಡಿಕೇರಿಯಲ್ಲಿ ಸುಂದರ ಸರಳ ಸಮಾರಂಭ :

ಕೊಡಗು ಗೌಡ ವಿದ್ಯಾಸಂಘ, ಮಡಿಕೇರಿ ಇದರಡಿಯಲ್ಲಿ ಪ್ರತಿವರ್ಷ ಪ್ರತಿಭಾವಂತರನ್ನು ಗುರುತಿಸಿ ಪುರಸ್ಕರಿಸುವ ಸಂಪ್ರದಾಯದಂತೆ ಈ ವರ್ಷವು ನಡೆಯಿತು. ಆದರೆ ಇಂದಿನ ಸಮಾರಂಭವು ಕೊಡಗು ಗೌಡ ವಿದ್ಯಾ ಸಂಘದ ಸ್ಮಾರಕ ನಿಧಿಗೆ ಕೊಟ್ಟ 99 ಮಂದಿ ಕೊಡುಗೈ ದಾನಿಗಳಿಗೆ ಆಮಂತ್ರಣ, ನಿಧಿಯಿಂದ ಉತ್ತೇಜನಗೊಂಡ ಪ್ರತಿಭಾವಂತರ ಪೋಷಕರಿಗೆ ಆಹ್ವಾನವಿದ್ದದ್ದು ವಿಶೇಷವಾಗಿತ್ತಲ್ಲದೆ ನೂರಾರು ಮಂದಿ ಹಾಜರಿದ್ದರು.

ಬೆಳಿಗ್ಗೆ 10-30ಕ್ಕೆ ಸರಿಯಾಗಿ ಸಂಘದ ಮುಖ್ಯ ದ್ವಾರದ ಗೇಟಿನ ಉದ್ಘಾಟನೆಯು ಸಂಘದ ಅಧ್ಯಕ್ಷರಾದ ಶ್ರೀ ಕೆ. ಕೆ. ಪೂರ್ಣಯ್ಯನವರಿಂದ ನೆರವೇರಿದರೆ, ನೂತನವಾಗಿ ರಚನೆಗೊಂಡ ಕೊಳವೆಬಾವಿಯ [ಬೋರ್‌ವೆಲ್] ಸ್ವಿಚ್ ಆನ್ ಮಾಡಿದವರು ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯರು, ಗಣ್ಯರು ಮಾಜೀ ಶಾಸಕರಾದ ಶ್ರೀ ಪಾಂಡನ ಡಿ. ಸುಬ್ಬಯ್ಯನವರು. ಲಘು ಉಪಹಾರದೊಂದಿಗೆ ಸಭೆಯು 11 ಗಂಟೆಗೆ ಪ್ರಾರಂಭವಾಯಿತು.

ವೇದಿಕೆಯಲ್ಲಿ ಅತಿಥಿಗಳಾಗಿ ಗೌಡ ಸಮಾಜ ಮಡಿಕೇರಿಯ ಅಧ್ಯಕ್ಷರಾದ ಶ್ರೀ ತೋಟಂಬೈಲು ನಾಣಯ್ಯನವರು, ಮುಖ್ಯ ದ್ವಾರದ ಗೇಟಿನ ದಾನಿಗಳಾದ ಶ್ರೀಮತಿ ಕೋಡಿಕೆಲ್ಲು ಚಂದ್ರಶೇಖರಿ ಪೂಣಚ್ಚನವರು, ಮಡಿಕೇರಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಶ್ರೀ ದೊಡ್ಡಡ್ಕ ಬಿ. ಬಾಲಕೃಷ್ಣನವರು ಹಾಗೂ ಮಡಿಕೇರಿ ನಗರ ಮಾಜಿ ಮೇಯರ್ ಆದ ಶ್ರೀ ಮುಕ್ಕಾಟಿ ಸಿ ವಾಸುದೇವ್‌ರವರು ಉಪಸ್ಥಿತರಿದ್ದ ಈ ಸಮಾರಂಭವು ಶ್ರೀಮತಿ ಮಂಞ್ಞಾಂಡ್ರ ರೇಖಾಉಲ್ಲಾಸ್‌ನವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು.

ಸ್ವಾಗತ ಭಾಷಣವನ್ನು ಸಂಘದ ಉಪಾಧ್ಯಕ್ಷರಾದ ಶ್ರೀ ಪಂಜಿಪಳ್ಳ ವೆಂಕಪ್ಪನವರು ಮಾಡಿದರೆ ಸಂಘದ ಧ್ಯೇಯೋದ್ದೇಶಗಳನ್ನು ವಿವರಿಸಿದವರು ಯುವ ನಿರ್ದೇಶಕರಾದ ಶ್ರೀ ಸೂರ್ತಲೆ ಸೋಮಣ್ಣನವರು. ಸರ್ವರಿಗೂ ಮನವರಿಕೆ ಮಾಡುತ್ತಾ ಪ್ರತಿಭಾವಂತರಿಗೆ ಮಾಡುವ ಪುರಸ್ಕಾರ ಜನಾಂಗದ ಪ್ರತಿಭಾವಂತ ವ್ಯಕ್ತಿಗಳಿಗೆ, ವಿದ್ಯೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡುವುದು ದಿಡೀರ್ ಆಗಿ ಈ ಕಾರ್ಯಕ್ರಮ ಹಚ್ಚಿಕೊಂಡರೂ ಸಹ ಈ ಸಭೆಯಲ್ಲಿ ಸ್ಮರಿಸಲೇಬೇಕಾದ ವ್ಯಕ್ತಿಯೆಂದರೆ ಈ ಸಂಘದ ಅಧ್ಯಕ್ಷರಾಗಿ, ಸ್ಮಾರಕ ನಿಧಿ ಬೆಳೆಸುವ ನಿಟ್ಟಿನಲ್ಲಿ ಶತಪ್ರಯತ್ನ ಪಟ್ಟ ದಿ|| ಕುದುಪಜೆ ಕೃಷ್ಣಪ್ಪನವರು. 1936ರಲ್ಲಿ ನಿಡ್ಯಮಲೆ ಶ್ರೀಮತಿ ದೇವಮ್ಮ ಮುದ್ದಪ್ಪನವರ ಹೆಸರಿನಲ್ಲಿ ಇವರ ಪತಿ ಮುದ್ದಪ್ಪನವರಿಂದ ಸ್ಥಾಪನೆಗೊಂಡ ಈ ನಿಧಿಯು ಇದ್ದರೂ ಸಹ ನಿಷ್ಕ್ರಿಯವಾಗಿ ಯಾವುದೇ ರೀತಿಯ ಚಟುವಟಿಕೆ ಪ್ರೋತ್ಸಾಹಗೊಳ್ಳದೆ ನೆನೆಗುದಿಗೆ ಬಿದ್ದಿದ್ದ ಈ ನಿಧಿಗೆ ತಮಗರಿವಿಲ್ಲದೆ ಚೇತನ ಶಕ್ತಿಯನ್ನು ನೀಡಿದವರು ನಮ್ಮ ಯುವ ನಿರ್ದೇಶಕರಾದ ಶ್ರೀ ಪಟ್ಟಡ ಪ್ರಭಾಕರ್‌ರವರು. 1976 ರಲ್ಲಿ ತಮ್ಮ ತಾಯಿ ದಿ|| ಪಟ್ಟಟ ನೀಲಮ್ಮ ಮುತ್ತಣ್ಣನವರ ಹೆಸರಿನಲ್ಲಿ 10ನೇ ತರಗತಿಯಲ್ಲಿ ನಮ್ಮ ಜನಾಂಗದ ಮಕ್ಕಳು ಯಾರು ಅತೀ ಹೆಚ್ಚು ಅಂಕ ಗಳಿಸುತ್ತಾರೋ ಆ ವಿದ್ಯಾರ್ಥಿಗೆ ಉತ್ತೇಜನ ರೂಪದಲ್ಲಿ ಬಹುಮಾನವಾಗಿ ರೂ.1000/- ಅನ್ನು ಸಂಘಕ್ಕೆ ನೀಡಿ, ಇದರಿಂದ ಬರುವ ಬಡ್ಡಿಯಿಂದ ಪ್ರತಿಭೆಯನ್ನು ಗುರುತಿಸಿ ರೂ. 100/- ಕೊಡುವಂತೆ ತೀರ್ಮಾನಿಸಿ,ಈನಿಧಿಯು ಪುನರ್‌ಶ್ಚೇತನಗೊಳ್ಳಲು ಪ್ರಾರಂಭಿಸಿದರು. ನಂತರ ಎಚ್ಚೆತ್ತ ಸಂಘವು ಶ್ರೀ ಕುದುಪಜೆ ಕೃಷ್ಣಪ್ಪ ಮತ್ತು ಯುವ ನಿರ್ದೇಶಕರಿಂದ ನಿಧಿ ಸಂಗ್ರಹ ಕಾರ್ಯ ಪ್ರಾರಂಭವಾಯಿತು. ಹೀಗೆ 1976ರಲ್ಲಿ ಸುರು ಆದ ಈ ನಿಧಿಗೆ 1978ರಲ್ಲಿ ಶ್ರೀ ಚೆರಿಯಮನೆ ದಿ|| ಪೊನ್ನಪ್ಪನವರು ತಮ್ಮ ತಂದೆ ಕುಶಾಲಪ್ಪನವರ ಹೆಸರಿನಲ್ಲಿ ರೂ. 10,000/- ಅನ್ನು, 1979 ರಲ್ಲಿ ವಿದ್ಯಾಸಂಘವು ರೂ. 4000/- ಅನ್ನು, 1982 ರಲ್ಲಿ ಚೆರಿಯಮನೆ ದಿ|| ಬೊಳ್ಳಮ್ಮನವರ ಹೆಸರಿನಲ್ಲಿ ರೂ. 1000/- ಮೊತ್ತಗಳಿಂದ ಈ ನಿಧಿಯು ನಿಧಾನವಾಗಿ ಬೆಳೆದು ಇಂದು 99 ಮಂದಿ ಕೊಡುಗೈ ದಾನಿಗಳಿಂದ ರೂ. 1,56,000/- ಗಳನ್ನು ಕ್ರೋಢಿಕರಿಸಿ, 20,000/- [ಇಪ್ಪತ್ತು ಸಾವಿರ] ರೂಪಾಯಿಗಳನ್ನು ಬರುವ ಬಡ್ಡಿ ಹಣದಿಂದ 22 ಮಂದಿ ಯುವ ವಿದ್ಯಾ ಪ್ರತಿಭೆಗಳಿಗೆ ಪುರಸ್ಕಾರ ಮತ್ತು ಪ್ರಮಾಣ ಪತ್ರವನ್ನು ನೀಡಿ ಸನ್ಮಾನಿಸಿದ್ದು ಈ ಸಂಘಕ್ಕೆ ಕಿರೀಟಪ್ರಾಯವಾಗಿದೆ.

1976ರಲ್ಲಿ ಶ್ರೀ ಪಟ್ಟಡ ಪ್ರಭಾಕರ ವಾಯುಸೇನೆಯಲ್ಲಿದ್ದಾಗ ತನ್ನ ಒಂದು ತಿಂಗಳ ಸಂಬಳದಿಂದ ಪುನಶ್ಚೇತನಗೊಂಡ ಈ ಸ್ಮಾರಕ ನಿಧಿಯು ಇಂದು ಈ ಮೊತ್ತಕ್ಕೆ ಬೆಳೆದು ನಿಂತಿರುವುದು ಶ್ಲಾಘನೀಯ. ಇದರ ಪೂರ್ತಿ 80 ರಷ್ಟು ಕಾರ್ಯವನ್ನು ಸ್ವತಃ ಕುದುಪಜೆ ಕೃಷ್ಣಪ್ಪನವರೇ ಪ್ರಯತ್ನಿಸಿದ್ದಾರೆ. ಅವರನ್ನು ಎಂದೂ ನಮ್ಮ ಅರೆಭಾಷಿಕ ಜನಾಂಗ ಮರೆಯಲು ಸಾಧ್ಯವಿಲ್ಲವೆಂದು ಶ್ರೀ ಪಾಂಡನ ಸುಬ್ಬಯ್ಯನವರು ತಿಳಿಸಿದರು. ಇದು ಅತಿಶಯೋಕ್ತಿಯಲ್ಲವೆಂಬುದನ್ನು "ಕೊಡಗು ಸಂಗಾತಿ" ಪತ್ರಿಕೆಗೆ ಮನವರಿಕೆಯಾಗಿದೆ. ಇನ್ನು ಮುಂದೆ ಇದೇ ತರದಲ್ಲಿ ಜನಾಂಗದ ಪ್ರತಿಯೊಬ್ಬ ಗೌರವವಂತ/ಸ್ಥಿತಿವಂತ ಕೊಡುಗೈ ದಾನಿಗಳಾಗಿ ಮುಂದೆ ಬಂದಾಗ ಮಾತ್ರವೇ ಈ ಸಂಘವು ಇನ್ನು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಲು ಶಕ್ತಿ ಬರುವುದೆಂದು ವೇದಿಕೆಯಲ್ಲಿ ಉಪಸ್ಥಿತರಿದ್ದ ಮತ್ತು ಸಭೆಗೆ ಆಗಮಿಸಿದ ದಾನಿಗಳಿಂದಲೂ ಕೇಳಿ ಬಂದ ಮಾತನ್ನು ಕೊಡಗು ಸಂಗಾತಿಯು ಕಿವಿಯಾರೆ ಕೇಳಿತು.

ವಿದ್ಯಾ ಸಂಘದ ಮುಖ್ಯ ದ್ವಾರದ ಗೇಟನ್ನು ದಾನವಾಗಿ ಕೊಟ್ಟ ಶ್ರೀಮತಿ ಕೊಡೆಕಲ್ಲು ಚಂದ್ರಶೇಖರ ಪೂಣಚ್ಚನವರನ್ನು ಮತ್ತು ದೊಡ್ಡಡ್ಕ ಬಿ. ಬಾಲಕೃಷ್ಣ ಮಡಿಕೇರಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ, ತಾಲ್ಲೂಕಿನ ಪ್ರಥಮಪ್ರಜೆ ಇವರುಗಳನ್ನು ಶಾಲು ಹೊದಿಸಿ ಸನ್ಮಾನಿಸಲಾಯಿತು. ಇನ್ನೊಬ್ಬ ಸನ್ಮಾನಿತರೆಂದರೆ ಶ್ರೀಮತಿ ಕಮಲಾ ಗಣಪತಿ, ಜಿಲ್ಲಾ ಪರಿಷತ್ ಉಪಾಧ್ಯಕ್ಷೆ. ಇವರ ಗೈರು ಹಾಜರಿಗೆ ಸಭೆಯು ವಿಷಾದಿಸಿತು. ಸನ್ಮಾನವನ್ನು ಸ್ವೀಕರಿಸಿದ ಶ್ರೀ ದೊಡ್ಡಡ್ಕ ಬಾಲಕೃಷ್ಣನವರು ದೊಡ್ಡ ಮನಸ್ಸಿನಿಂದ ಸಂಘದ ನಿಧಿ ಬೆಳವಣಿಗೆಗೆ, ತನ್ನ ತಂದೆ ಇದೇ ಸಂಘದ ಕಟ್ಟಡದಲ್ಲಿ ವಿದ್ಯಾರ್ಜನೆ ಮಾಡಿದ ಸವಿನೆನಪಿಗಾಗಿ ರೂ. 2000/- ಕೊಟ್ಟು ಸ್ಮಾರಕ ನಿಧಿ ವೃದ್ಧಿಸಲು ನೆರವಾದರು.

ಮಾಜಿ ಮೇಯರ್ ಶ್ರೀ ಮುಕ್ಕಾಟಿ ವಾಸುದೇವರವರು ಸಂಘದ ಅಭಿವೃದ್ಧಿ ಮತ್ತು ಸ್ಮಾರಕ ನಿಧಿ ಬಗ್ಗೆ ಚಿಂತಿಸಿದರು. 1908ರಲ್ಲಿ ಸ್ಥಾಪನೆಗೊಂಡ ಈ ವಿದ್ಯಾಸಂಘವು, ಅಂದು ನಮ್ಮ ಹಿರಿಯರು ಸಮಾಜಕ್ಕಿಂತ ವಿದ್ಯೆಗೆ ಹೆಚ್ಚು ಪ್ರೋತ್ಸಾಹ ಕೊಟ್ಟಿದ್ದಾರೆ ಎನ್ನುವ ಮಾತು ಸಹ ಕಟು ಸತ್ಯ. ಅದರ ಪ್ರಭಾವವೇ ಇಂದು ವಿದ್ಯೆಯಲ್ಲಿ ಸಾಕಷ್ಟು ಮಂದಿ ಮುಂದುವರಿಯಲು ಸಾಧ್ಯವಾಯಿತೆಂದರು. 1936ರ ಸುಮಾರಿಗೆ ದಿ|| ಶ್ರೀ ನಿಡ್ಯಮಲೆ ಮುದ್ದಪ್ಪ ಮತ್ತು ಅವರ ಸಹಪಾಠಿಗಳ ಪ್ರಯತ್ನವನ್ನು ಸಹ ಅವಲೋಕಿಸಿದರು. ನೂತನವಾಗಿ ಪ್ರಾರಂಭಗೊಂಡ ಗೌಡ ಜನಾಂಗದ ಏಕೈಕ ಪಾಕ್ಷಿಕ ಪತ್ರಿಕೆ, "ಕೊಡಗು ಸಂಗಾತಿ"ಯ ಗೌರವ ಸಂಪಾದಕ ಶ್ರೀ ಪಟ್ಟಡ ಪ್ರಭಾಕರರವರು ಪತ್ರಿಕೆಯು ಗೌಡ ಜನಾಂಗಕ್ಕಿರುವ ಅವಶ್ಯಕತೆ, ಯುವಶಕ್ತಿಯನ್ನು ಬಡಿದೆಬ್ಬಿಸುವ ಏಕೈಕ ಮಾಧ್ಯಮ, ಅವರೆಲ್ಲರ ಚಿಂತನ ಮಂಥನವಾಗಲು, ತಮ್ಮ ಅರಿಯು ತಿಳಿಯು ಮೂಡಲು ಈ ಪತ್ರಿಕೆಯನ್ನು ಬೆಳೆಸುವ ನಿಟ್ಟಿನಲ್ಲಿ, ಜನಾಂಗದ ಮಾಧ್ಯಮವಾಗಿ ಬೆಳೆಸುವಂತೆ ವಿನಂತಿಸಿದರು. ಗ್ರಾಮ ಮಟ್ಟದಿಂದ ಗ್ರಾಮ ಪ್ರತಿಭೆಗಳನ್ನು ಹೆಕ್ಕಿ ತರುತ್ತಿದೆ. ಕಾಲ ಕಂಡು ಇತಿಹಾಸವಾಗಿರುವ ನಮ್ಮ ಹಿರಿಯರ ಕೆಲಸ ಕಾರ್ಯಗಳನ್ನು ಹೆಕ್ಕುತ್ತಿದೆ. ಪ್ರತಿಯೊಬ್ಬರು ತಮ್ಮಲ್ಲಿರುವ ದ್ವೇಷ, ಮತ್ಸರ, ಸಣ್ಣತನ ಇತ್ಯಾದಿ ಬಿಟ್ಟು ಮುಂದೆ ಬಂದಾಗ ಅಲ್ಲದೆ ಒಂದು ಜನಾಂಗದ ಐಕ್ಯತೆ ಮತ್ತು ಏಳಿಗೆಯೇ ಒಂದು ದೇಶದ ಪ್ರಗತಿಯಾದ್ದರಿಂದ ಈ ರೀತಿಯಾಗಿ ನಮ್ಮ ಜನಾಂಗದ ಕಾಣಿಕೆಯನ್ನು ದೇಶಕ್ಕೆ ನೀಡೋಣವೆಂದರು. ಇನ್ನೊಬ್ಬರು ಶ್ರೀ ಕಾಳೇರಮ್ಮನ ದೇವಯ್ಯನವರು ಮಾತನಾಡಿ ಸಮಾಜ ಬಲಿಷ್ಠವಾಗಿ ಬೆಳೆಯಲು ಪರಿಚಯಗೊಳ್ಳಲು, ಪ್ರಾಪ್ತ ವಯಸ್ಸಿಗೆ ಮಕ್ಕಳು ಬಂದಾಗ ಇಂತಹ ಯುವಶಕ್ತಿ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಿದಾಗ ಅವರಿಂದ ಈ ಸಮಾಜವು ಉತ್ತಮ ಕಾಣಿಕೆಯನ್ನು ನಿರೀಕ್ಷಿಸಲು ಸಾಧ್ಯವೆಂದು ತಮ್ಮ ಹರ್ಷ ವ್ಯಕ್ತಪಡಿಸಿದರು.

ಸಮಾಜಕ್ಕಾಗಿ ಅಪಾರ ಸೇವೆಗೈದು ಭೀಷ್ಮರೆನಿಸಿ ದುಡಿದು ಮಡಿದ ದಿ|| ನಿಡ್ಯಮಲೆ ಮುದ್ದಪ್ಪ ಜಡ್ಜ್‌ರವರ ಜನ್ಮಶತಾಬ್ದಿ ಆಚರಣೆಯನ್ನು ವಿಜೃಂಭಣೆಯಿಂದ ಆಚರಿಸುವಂತೆ ಸಮಾಜ ಮತ್ತು ವಿದ್ಯಾ ಸಂಘವು ಜಂಟಿಯಾಗಿ ತೀರ್ಮಾನಿಸಿದವು.

ಕೊನೆಯದಾಗಿ ವಿದ್ಯಾಸಂಘದ ಹಾಲಿ ಸಕ್ರಿಯ ಕ್ರಿಯಾತ್ಮಕ ಕಾರ್ಯದರ್ಶಿ ಶ್ರೀ ಕೋಳುಮುಡಿಯನ ಅನಂತಕುಮಾರ್ ಆಕರ್ಷಣೀಯವಾಗಿ ಸಭೆಯನ್ನು ನಿರೂಪಿಸುವುದರೊಂದಿಗೆ, ಆಗಮಿಸಿದ ಸರ್ವರಿಗೂ ಶುಭವನ್ನು ಕೋರಿ ವಂದನಾರ್ಪಣೆಗೈದರು. ರಾಷ್ಟ್ರಗೀತೆಯೊಂದಿಗೆ ಸಮಾರಂಭವು ತೆರೆಕಂಡಿತು.

1996-97ರ ಸಾಲಿನಲ್ಲಿ ಪುರಸ್ಕರಿಸಲ್ಪಟ್ಟ ನಮ್ಮ ಹೆಮ್ಮೆಯ ಮಕ್ಕಳು

ಏಳನೇ ತರಗತಿಯ ವಿದ್ಯಾರ್ಥಿಗಳು :

1. ಕುಯ್ಯಮುಡಿ ಪೂಜಾ–ಚಂಗಪ್ಪ ಮೈಸೂರು 1,000
2. ಮುಕ್ಕಾಟಿ ಕಿರಣ್‌ಕುಮಾರ್-ರಾಮಯ್ಯ ಮರಗೋಡು 800
3. ಕಾಳೇರಮ್ಮನ ಪೂಜಾ–ವಸಂತಕುಮಾರ್ ಮಡಿಕೇರಿ 700
4. ಬೈತಡ್ಕ ಧನ್ಯ–ಈರಪ್ಪ ಸೋಮವಾರಪೇಟೆ 600
5. ಕುಯ್ಯಮುಡಿ ಕುಮಾರವೇಲ–ಪೂರ್ಣಯ್ಯ ಮಡಿಕೇರಿ 500

(11ನೇ ಪುಟ ನೋಡಿ)

S.S.L.C. ವಿದ್ಯಾರ್ಥಿಗಳು :

1.	ಕೂಡಕಂಡೀರ ಬಬಿತ-ಬಸಪ್ಪ ಮೈಸೂರು	1200
2.	ಕೆದಂಬಾಡಿ ರೀನಾ–ಸೋಮಣ್ಣ ಬೆಂಗಳೂರು	800
3.	ಕುಯ್ಯಮುಡಿ ದಾಮನ್–ರಾಮಪ್ಪ ಮೈಸೂರು	700
4.	ಮೂಲೆಮನೆ ಕಾವ್ಯ-ತಿಮ್ಮಪ್ಪ ಮಡಿಕೇರಿ	600
5.	ಕಾಳೇರಮ್ಮನ ಕೃಪ-ದೇವಯ್ಯ ಮಡಿಕೇರಿ	500

P.U.C. ವಿದ್ಯಾರ್ಥಿಗಳು :

1.	ಕೊಡಪಾಲ್ ಕಿಶಾನ್-ಬಾಲಕೃಷ್ಣ ಮೈಸೂರು	1000
2.	ನಿಡ್ಯಮಲೆ ರೇಶ್ಮ-ಅನುರಾಜು ಮಡಿಕೇರಿ	1000
3.	ಕಾಳೇರಮ್ಮನ ಮೀರಾ–ಗಣಪತಿ ಮಂಡ್ಯ	700
4.	ಕೊಂಪುಳೀರ ಇಂದುಮತಿ-ಸೋಮಪ್ಪ ಮದೆನಾಡು	700
5.	ಚೀಯಪ್ಪನ ನೂತಾನ್ ಪೂವಯ್ಯ ಮಡಿಕೇರಿ	600
6.	ಯಾಲದಾಳು ಶಭರೀಶ್-ಮಾದಪ್ಪ ಮರಗೋಡು	500

ಡಿಗ್ರಿ ವಿದ್ಯಾರ್ಥಿಗಳು :

1.	ಪಟ್ಟಡ ಶೋಭಾ-ದೇವಯ್ಯ ಅಮ್ಮಂದೂರು	1000
2.	ಪಾರೆಮಜಲ್ಲು ಪಲ್ಲವಿ-ಉತ್ತಯ್ಯ ಮಡಿಕೇರಿ	1000
3.	ಪರಿವಾರ ಗೀತಾಂಜಲಿ-ಅಪ್ಪಾಜಿ ಮಡಿಕೇರಿ	800

ಮಾಸ್ಟರ್ ಡಿಗ್ರಿ ವಿದ್ಯಾರ್ಥಿಗಳು :

1.	ಬಾಳಾಡಿ ಮಂಜುಳ-ಉತ್ತಯ್ಯ ಮೈಸೂರು	1000
2.	ಕಾಳೇರಮ್ಮನ ಭಾಮಿನಿ-ರಾಘವಯ್ಯ ಮಡಿಕೇರಿ	1000

ರಾಷ್ಟ್ರೀಯ ಮಹಿಳಾ ಹಾಕಿ ತಂಡಕ್ಕೆ ನಮ್ಮ ಗೂಡೆ ಹುಲಿಮನೆ ಆರ್. ಮಂಜುಳಾ ಆಯ್ಕೆ

ಅಲಹಾಬಾದ್‌ನಲ್ಲಿ ನಡೆಯುತ್ತಿರುವ 12ನೇ ರಾಷ್ಟ್ರೀಯ ಸಬ್ ಜೂನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸುತ್ತಿರುವ ಕರ್ನಾಟಕದ ಮಹಿಳಾ ಕಿರಿಯರ ತಂಡಕ್ಕೆ ಕು|| ಎಚ್. ಆರ್. ಮಂಜುಳಾ ಆಯ್ಕೆ ಆಗಿದ್ದಾಳೆ.

ಇವಳನ್ನು "ಭರವಸೆಯ ಕ್ರೀಡಾಪಟು" ಎಂದು ನಮ್ಮ ಪತ್ರಿಕೆಯ 8ನೇ ಸಂಚಿಕೆಯಲ್ಲಿ ಛಾಯಾಚಿತ್ರದೊಂದಿಗೆ ಕಿರು ಪರಿಚಯವನ್ನು ನೀಡಿತ್ತು. ಮಂಜುಳಾಳ ಚಿನ್ನದ ಕಾಲುಗಳಿಗೆ ವಜ್ರದ ಶಕ್ತಿ ಬರಲೆಂದು ಓದುಗರ ಮತ್ತು ಸಂಗಾತಿಯ ಹಾರೈಕೆಯಾಗಿದೆ.

ಆದಿಶ್ರೀ ಕಾವೇರಿ

ಆದಿ ಕಾವೇರಮ್ಮೆ ದೇವಿಡ ಪಾದಕ್ಕೆಕ್ಕಲು ಮಂಗಳಂ ।
ಮಾದಮಂಗು ಪರಮೇಶ ದೇವಂಗು ಪಾದಕೆಕ್ಕಲೂ ಮಂಗಳಂ ॥

ಮೂಂದ್ ಮೂರ್ತಿಯ ಮೆಚ್ಚಿ ಬಾವಳ ।
ಮೂಂದ್ ದ್ಯಾವಕ್ ಮಂಗಳಂ ॥

ಎಂದ್ ಗುಣತ್‌ಲೊ ಕುಂದ್‌ಲುದಿಚೊರ್ ।
ಕುಂದ್ ದೇವಿಕ್ ಮಂಗಳಂ ॥

ತಾಪಸಂಡನು ಸಾಸೆತ್‌ಪೊರ್ ।
ಲೋಪ ಮುದ್ರಿಕ್ ಮಂಗಳಂ ॥

ಪಾಪ ನಾಶನಿಯಾಯಿ ಜಗತ್‌ಲ್ ।
ಪೊಪ ದೇವಿಕ್ ಮಂಗಳಂ ॥

ಗಂಗೆ ಯಮುನೆ ತುಂಗೆ ಭದ್ರೆಡ ।
ಪೊಂಗುರಿಕ್ ಮಹಾಮಂಗಳಂ ॥

ಬಾಂಗತ್ ಹರದಾಸ ತುದಿಪೊರ್ ।
ಗಂಗೆಡಮ್ಮಂಗ್ ಮಂಗಳಂ ॥

ಆದಿ ಕಾವೇರಮ್ಮೆ ದೇವಿಡ ಪಾದಕ್ಕೆಕ್ಕಲು ಮಂಗಳಂ ।
ಮಾದಮಂಗು, ಪರಮೇಶರಂಗು ಪಾದಕ್ಕೆಕ್ಕಲೂ ಮಂಗಳಂ ॥

● **ಚೊಟ್ಟೆಕೋರಿಯಂಡ ಪದ್ಮಾ W/o ಬಾಲಕೃಷ್ಣ,**
ಜಿಲ್ಲಾ ಪ್ರಧಾನ ನ್ಯಾಯಾಧೀಶರು, ಧಾರವಾಡ.

ನಿಮ್ಮಲ್ಲಿಗೆ ಬಂದು ಹೋಗುವ ಇಬ್ಬರು

ಬರುವುದು ಹೋಗುವುದು — ಸಂತೋಷ, ದುಃಖ
ಬಂದರೆ ಹೋಗಲಾರದು — ಹೆಮ್ಮೆ, ಅಪರಾಧ
ಹೋದರೆ ಬರದೆ ಇರುವುದು — ಮಾನ, ಪ್ರಾಣ
ತಾನಾಗಿ ಬರುವುದು — ಪ್ರಾಯ, ಮುಪ್ಪು
ತಡೆಯಲು ಆಗದೇ ಇರುವುದು— ಆಸೆ, ದುಃಖ
ನಮ್ಮ ಜೊತೆಯಲ್ಲೇ ಬರುವುದು– ಪಾಪ, ಪುಣ್ಯ
ಸಹಿಸಲಾಗದೇ ಇರುವುದು — ಹಸಿವು, ದಾಹ
ಬೇರ್ಪಡಿಸಲಾಗದಿರುವುದು — ಸಂಬಂಧ, ಪ್ರೀತಿ
ಎಲ್ಲರಿಗೂ ಸಮವಾಗಿರುವುದು — ಹುಟ್ಟು, ಸಾವು

ಬಿದುಪಣೆ ವೈ. ಜನಾರ್ಧನ, ಮೈಸೂರು.

ಸಾಕ್ಷಿ

ಹಿಂದೆ ರಾಮಣ್ಣ ಮತ್ತು ಭೀಮಣ್ಣ ರೆಂಬ ವರ್ತಕರಿದ್ದರು. ರಾಮಣ್ಣನ ಅಂಗಡಿಯ ಎದುರೇ ಭೀಮಣ್ಣನ ಅಂಗಡಿ ಇತ್ತು. ಇಬ್ಬರು ಒಂದೇ ಬಗೆಯ ಸರಕು ಗಳನ್ನು ಮಾರುತ್ತಿದ್ದರು. ಆದರೆ ಇಬ್ಬರ ಗುಣದಲ್ಲಿ ಮಾತ್ರ ಅಜಗಜಾಂತರವಿತ್ತು. ರಾಮಣ್ಣ ಸಾಧು ಸ್ವಭಾವದ ಮೃದು ಭಾಷಿ. ಗಿರಾಕಿಗಳನ್ನು ನಗುಮೊಗದಿಂದ ಮಾತನಾಡಿಸುತ್ತಿದ್ದ. ಎಂದೂ ಮುಖ ಗಂಟಿಕ್ಕಿದವನಲ್ಲ. ಕೋಪಗೊಂಡವನಲ್ಲ. ಆದರೆ ಭೀಮಣ್ಣ ಒರಟ. ಸಿಡುಕು ಸ್ವಭಾವದವನು ಗಿರಾಕಿಗಳೊಡನೆ ಎಷ್ಟು ಬೇಕೋ ಅಷ್ಟೇ ಮಾತು. ಇದರಿಂದ ಅವನ ವ್ಯಾಪಾರ ಚೆನ್ನಾಗಿರಲಿಲ್ಲ. ತನ್ನ ಗುಣಗಳಿಂದ ಗಿರಾಕಿಗಳನ್ನು ಆಕರ್ಷಿಸಿ ಚೆನ್ನಾಗಿ ವ್ಯಾಪಾರ ಮಾಡಿಕೊಂಡಿದ್ದ ರಾಮಣ್ಣನ ಮೇಲೆ ಅವನಿಗೆ ಅಸೂಯೆ ಮೂಡಿತ್ತು. ಅಸೂಯೆ ದ್ವೇಷಕ್ಕೆ ತಿರುಗಿ ರಾಮಣ್ಣನನ್ನು ಮುಗಿಸಿ ಬಿಡಲು ಹೊಂಚು ಹಾಕುತ್ತಿದ್ದ.

ಪ್ರತಿದಿನ ಸೂರ್ಯ ಮುಳುಗಿದ ಮೇಲೆ ರಾಮಣ್ಣ ಅಂಗಡಿ ಮುಚ್ಚಿ ಮೂರು ಮೈಲು ದೂರದ ತನ್ನ ಹಳ್ಳಿಗೆ ನಡೆದು ಹೋಗುತ್ತಿದ್ದ. ಕತ್ತಲಾದ ಮೇಲೆ ಆ ಕಡೆ ಜನಸಂಚಾರ ಕಡಿಮೆ ಇರುತ್ತಿತ್ತು. ಒಂಟಿಯಾಗಿ ಹೋಗಿಬರುವುದು ರಾಮಣ್ಣನಿಗೆ ರೂಢಿಯಾಗಿತ್ತು.

ಒಂದು ದಿನ ಅಂಗಡಿ ಮುಚ್ಚಿ ರಾಮಣ್ಣ ಮನೆಗೆ ಹೊರಟ. ಬೆಳದಿಂಗಳು ಚೆನ್ನಾಗಿತ್ತು. ಮಳೆಯೂ ಬರುತಿತ್ತು. ದುಷ್ಟ ಭೀಮಣ್ಣ ಅವನಿಗೆ ತಿಳಿಯದಂತೆ ಹಿಂಬಾಲಿಸಿ ಹೋದ. ಸಮಯ ನೋಡಿ ಹಿಂದಿನಿಂದ ರಾಮಣ್ಣನ ತಲೆಗೆ ಕಬ್ಬಿಣದ ಸರಳಿನಿಂದ ಬಲವಾಗಿ ಹೊಡೆದ. ಕುಸಿದುಬಿದ್ದ ರಾಮಣ್ಣ ಭೀಮಣ್ಣನನ್ನು ಕಂಡು "ಅಯ್ಯೋ ಪಾಪಿ, ಕೊಲೆ ಮಾಡುತ್ತಿರುವೆಯಲ್ಲೋ! ನಿನ್ನ ಈ ಪಾಪಕಾರ್ಯಕ್ಕೆ ನಿನಗೆ ಗಲ್ಲು ಶಿಕ್ಷೆಯಾಗದಿರದು" ಎಂದ ನೋವಿನಿಂದ ನರಳುತ್ತ. "ಗಲ್ಲು ಶಿಕ್ಷೆಯಾಗಲಿಕ್ಕೆ ಇಲ್ಲಿ ಯಾರು ಸಾಕ್ಷಿ ಇದ್ದಾರೆ" ಎಂದ ಭೀಮಣ್ಣ.

ಅಲ್ಲಿ ಆ ಹೊತ್ತಿನಲ್ಲಿ ಯಾರೂ ಇರಲಿಲ್ಲ ನಿಜ. ಆದರೆ ಮಳೆಗೆ ನೆಲದ ಮೇಲೆ ನಿಂತ ನೀರಿನ ಮೇಲೆ ಮಳೆಯ ಹನಿಗಳು ಬಿದ್ದಾಗ ದೊಡ್ಡ ದೊಡ್ಡ ಗುಳ್ಳೆಗಳು ಏಳುತ್ತಿದ್ದವು. ತಿಂಗಳ ಬೆಳಕಿನಲ್ಲಿ ಅವುಗಳು ಮುತ್ತಿನಂತೆ ಹೊಳೆಯುತ್ತಿದ್ದವು. ರಾಮಣ್ಣ ಅವುಗಳನ್ನು ನೋಡಿ "ಈ ನೀರ ಗುಳ್ಳೆಗಳೇ ಸಾಕ್ಷಿ" ಎಂದ. ತಡಮಾಡಿದರೆ ಯಾರಾದರೂ ಆ ದಾರಿಯಲ್ಲಿ ಬಂದರೂ ಬಂದಾರು ಎಂದು ಅಂಜಿದ ಭೀಮಣ್ಣ ಅಸಹಾಯಕ ಸ್ಥಿತಿಯಲ್ಲಿ ಸಾವು ಬದುಕುಗಳ ಮಧ್ಯೆ ಹೋರಾಡುತ್ತಿದ್ದ ರಾಮಣ್ಣನನ್ನು ಅಲ್ಲೇ ಇದ್ದ ಹೊಂಡಕ್ಕೆ ತಳ್ಳಿ ಓಡಿಬಿಟ್ಟ. ಮರುದಿನ ರಾಮಣ್ಣನ ಹೆಣ ಸಿಕ್ಕಿದರೂ ಕೊಲೆಗಾರ ಯಾರೆಂದು ಪತ್ತೆಯಾಗಲಿಲ್ಲ. ಭೀಮಣ್ಣ ಗುಮಾನಿ ಬರದಂತೆ ಇದ್ದುಬಿಟ್ಟ. ಮೊಸಳೆ ಕಣ್ಣೀರು ಹಾಕಿಬಿಟ್ಟ.

ಒಂಭತ್ತು ವರ್ಷಗಳು ಕಳೆದುಹೋದವು. ಒಂದು ದಿನ ಭೀಮಣ್ಣ ಊಟಮಾಡಿ ಎಲೆ ಅಡಿಕೆ ಜಗಿಯುತ್ತಾ ಪಡಶಾಲೆಯ ಉಯ್ಯಾಲೆಯಲ್ಲಿ ಕುಳಿತಿದ್ದ. ಹೆಂಡತಿಯೂ ಅಲ್ಲೇ ಕುಳಿತಿದ್ದಳು. ಆಗ ಜೋರಾಗಿ ಮಳೆ ಬೀಳುತ್ತಿತ್ತು. ಮಳೆಯ ಹನಿಗಳು ನೆಲದ ನೀರಿನ ಮೇಲೆ ಬಿದ್ದಾಗ ದೊಡ್ಡ ದೊಡ್ಡ ಗುಳ್ಳೆಗಳು ಏಳುತ್ತಿದ್ದವು. ಪಾಪಗಳು ಮನುಷ್ಯನನ್ನು ವಿಷ ಸರ್ಪಗಳಂತೆ ಸುತ್ತಿಕೊಂಡಿರುತ್ತವೆ. ಕೆಟ್ಟಕಾಲ ಬಂದಾಗ ಹೆಡೆಬಿಚ್ಚಿ ಕಡಿದಂತೆ ಅವನನ್ನು ಅವನ ಪಾಪಗಳು ನಾಶ ಮಾಡುತ್ತವೆ. ಭೀಮಣ್ಣನಿಗೆ ಕೆಟ್ಟಕಾಲ ಪ್ರಾರಂಭವಾಗಿತ್ತು. ಏಳುತಿದ್ದ ಗುಳ್ಳೆಗಳನ್ನು ನೋಡಿದಾಗ ಅವನಿಗೆ ಒಂಭತ್ತು ವರ್ಷಗಳ

ಬೈತಡ್ಕ ಹೇಮ ಕುಂಜಪ್ಪ, ಕೊಡಗು

ಹಿಂದೆ ರಾಮಣ್ಣ ಸಾಯುವ ಮೊದಲು "ಈ ನೀರ ಗುಳ್ಳೆಗಳೇ ಸಾಕ್ಷಿ" ಎಂದಿದ್ದ ಮಾತು ನೆನಪಾಯಿತು. ಒಮ್ಮೆಗೆ ಜೋರಾಗಿ ನಕ್ಕುಬಿಟ್ಟ.

ಭೀಮಣ್ಣ ಕಾರಣವಿಲ್ಲದೆ ಜೋರಾಗಿ ನಕ್ಕದ್ದು ನೋಡಿ ಹೆಂಡತಿಗೆ ಆಶ್ಚರ್ಯವಾಯಿತು. ಹಾಗೆ ನಗಲು ಕಾರಣವೇನಿತ್ತೆಂದು ತಿಳಿಸಬೇಕೆಂದು ಹಠ ಹಿಡಿದಳು. ಈಗ ಭೀಮಣ್ಣನಿಗೆ ತಪ್ಪಿನ ಅರಿವಾಯಿತು. ಗುಟ್ಟು ರಟ್ಟಾದರೆ ತಲೆದಂಡ ತೆರಬೇಕಾದೀತು ಎಂದು ನಡುಗಿದ. ಆದರೂ ಸುಧಾರಿಸಿಕೊಂಡು ಹೆಂಡತಿಯ ಸಮಾಧಾನಕ್ಕೆ ಏನೋ ಕಾರಣ ಹೇಳಿದ. ಗಂಡನ ಮಾತು ಸುಳ್ಳೆಂದು ತಿಳಿಯಲು ಕಷ್ಟವಾಗಲಿಲ್ಲ. ನಿಜ ಹೇಳಲೇಬೇಕೆಂದು ದುಂಬಾಲು ಬಿದ್ದಳು. ಒಂಭತ್ತು ವರ್ಷಗಳ ನಂತರ ಹೆಂಡತಿಗೆ ಹೇಳಿದರೆ ಏನೂ ಆಗದು ಎಂದು ಭಾವಿಸಿ ಭೀಮಣ್ಣ "ನೋಡೇ, ಹೇಳುತ್ತೇನೆ. ಆದರೆ ನೀನು ಬಾಯಿ ಬಿಟ್ಟರೆ ನಾನು ಕೆಟ್ಟೆ" ಎಂದು ಎಚ್ಚರಿಕೆ ಹೇಳಿ ರಾಮಣ್ಣನ ಕೊಲೆಯ ಗುಟ್ಟನ್ನು ಬಿಟ್ಟುಕೊಟ್ಟ.

ಕೆಲವು ದಿನಗಳು ಕಳೆದವು. ತನ್ನ ಕಿವಿಗೆ ಬಿದ್ದ ಬೇರೆಯವರ ಗುಟ್ಟನ್ನು ಯಾವ ಹೆಣ್ಣಾದರೂ ಗುಟ್ಟಾಗಿ ಇಟ್ಟಾಳೆ? "ಯಾರಿಗೂ ಹೇಳಬೇಡಿ, ನಿಮ್ಮಲ್ಲೇ ಇರಲಿ" ಎಂಬ ಮಾಮೂಲಿ ಎಚ್ಚರಿಕೆಯೊಂದಿಗೆ

ಬೇರೆಯವರ ಕಿವಿಗೆ ಇತರರ ಗುಟ್ಟನ್ನು ಹಾಕದಿದ್ದರೆ ಅವರಿಗೆ ಸಮಾಧಾನವಿಲ್ಲ. ಗಂಡನ ಗುಟ್ಟನ್ನು ಯಾರಾದರೂ ಆತ್ಮೀಯರಲ್ಲಿ ಹೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆನಿಸಿತು ಭೀಮಣ್ಣನ ಹೆಂಡತಿಗೆ. ಆತ್ಮೀಯರಲ್ಲಿ ಹೇಳಿದರೆ ಗುಟ್ಟು ರಟ್ಟಾಗದೆಂದು ತಪ್ಪಾಗಿ ನಂಬಿದ್ದಳು.

ಒಂದು ದಿನ ಆತ್ಮೀಯ ಗೆಳತಿಯರಲ್ಲಿ ಒಬ್ಬಳು ಮನೆಗೆ ಬಂದಳು. ತಿಂಡಿ ತೀರ್ಥ ಆಗಿ ಅದು ಇದು ಲೋಕರೂಢಿ ಮಾತು ಸುರುವಾಯಿತು. ಅವಳು ಒಂದಷ್ಟು ಅಪರಿವರ ಸುದ್ದಿ, ಗುಟ್ಟು ತಂದು ಇಲ್ಲಿ ಬಿತ್ತಿದಳು. ಇವಳೂ ಹಿಂದು ಮುಂದು ಯೋಚಿಸದೆ ಗಂಡ ಹೇಳಿದ ರಾಮಣ್ಣನ ಕೊಲೆಯ ಗುಟ್ಟನ್ನು ಗೆಳತಿಗೆ ಹೇಳಿ "ನೋಡೇ, ಅದು ಇದು ಮಾತಿನಲ್ಲಿ ಈ ಗುಟ್ಟನ್ನು ಬೇರೆಯವರಿಗೇನಾದರೂ ಹೇಳಿ ಬಿಡಬೇಡ." ಎಂದು ಎಚ್ಚರಿಕೆ ನೀಡಿ ಸಮಾಧಾನ ಪಟ್ಟಳು.

ಆ ಗೆಳತಿಗೆ ರಾಜನ ಸೇನಾಪತಿಯ ಪತ್ನಿಯೊಡನೆ ಗೆಳೆತನವಿತ್ತು. ಒಂದು ದಿನ ಅವಳು ಸಿಕ್ಕಾಗ ಅದು ಇದು ಮಾತನಾಡಿ ಭೀಮಣ್ಣನ ಹೆಂಡತಿ ಹೇಳಿದ ಗುಟ್ಟನ್ನೂ ಹೇಳಿ "ಯಾರಿಗೂ ಹೇಳಿಬಿಡಬೇಡ" ಎಂದು ಎಚ್ಚರಿಸಿದಳು. ಆದರೆ ಗುಟ್ಟು ತಿಳಿದ ಮೇಲೆ ಅವಳ ಬಾಯಿ ಸುಮ್ಮನಿರಲಿಲ್ಲ. ಗಂಡ ಮನೆಗೆ ಬಂದಾಗ ಅವನಲ್ಲಿ ಹೇಳಿದಳು.

ಮರುದಿನ ಸೇನಾಪತಿ ರಾಜನನ್ನು ಭೇಟಿಯಾದಾಗ 9 ವರ್ಷಗಳ ಹಿಂದೆ ರಾಮಣ್ಣನನ್ನು ಕೊಲೆ ಮಾಡಿದವನು ಬೇರೆಯಾರೂ ಅಲ್ಲ, ಭೀಮಣ್ಣ ಎಂಬ ಸತ್ಯವನ್ನು ರಾಜನಿಗೆ ತಿಳಿಸಿದನು. ಕೂಡಲೇ ರಾಜನು ಭಟರನ್ನು ಕಳುಹಿಸಿ ಭೀಮಣ್ಣನನ್ನು ಹಿಡಿದು ತರಿಸಿದನು. ವಿಚಾರಣೆಯಲ್ಲಿ ಭೀಮಣ್ಣ ರಾಮಣ್ಣನನ್ನು ಕೊಲೆ ಮಾಡಿರುವುದನ್ನು ಒಪ್ಪಿಕೊಳ್ಳಲೇಬೇಕಾಯಿತು. ರಾಜಾಜ್ಞೆಯಂತೆ ಭೀಮಣ್ಣನನ್ನು ಕೊಲೆಯ ಅಪರಾಧಕ್ಕಾಗಿ ಸಾರ್ವಜನಿಕ ಸ್ಥಳದಲ್ಲಿ ಶೂಲಕ್ಕೇರಿಸಲಾಯಿತು. ನೀರಿನ ಗುಳ್ಳೆಗಳು ಸಾಕ್ಷಿ ಹೇಳಿದ್ದವು. ಕೊಲೆಗಾರನಿಗೆ ಮರಣದಂಡನೆ ವಿಧಿಸಿದವು.

ಕ್ಷುಲ್ಲಕವಾದುದೆಂದು ಅಲ್ಲಗಳೆಯಬಾರದು, ತಾತ್ಸಾರ ಮಾಡಬಾರದು. ಧರ್ಮದಿಂದ ನಡೆಯುವವನನ್ನು ಹುಲ್ಲು ಕಡ್ಡಿಯೂ ರಕ್ಷಿಸಬಲ್ಲದು. ●

ಜಿಲ್ಲಾ ಮಟ್ಟದ ಕೈಗಾರಿಕಾ ಪ್ರಶಸ್ತಿ ಪಡೆದ ಭರತ್

ಮಡಿಕೇರಿ ನಗರದ ವೆಸ್ಟರ್ನ್ ವರ್ಕ್ಸ್‌ನ ಮಾಲೀಕ ವಿ. ಎಸ್. ಭರತ್ ಅವರು ರಾಜ್ಯ ಸರ್ಕಾರದ ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೋದ್ಯಮಿಗಳಿಗೆ ನೀಡುವ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಇತ್ತೀಚಿಗೆ ರಾಜ್ಯಪಾಲ ಖುರ್ಷಿದ್ ಆಲಂಖಾನ್ ಅವರಿಂದ ಸ್ವೀಕರಿಸಿದರು.

ಬೆಂಗಳೂರು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜರುಗಿದ ಪ್ರಶಸ್ತಿ ವಿತರಣಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮುಖ್ಯಮಂತ್ರಿ ಜೆ. ಹೆಚ್. ಪಟೇಲ್ ಅವರು ವಹಿಸಿದ್ದರು. ಈ ಸಂದರ್ಭದಲ್ಲಿ ಕೈಗಾರಿಕಾ ಮಂತ್ರಿ ಆರ್. ವಿ. ದೇಶಪಾಂಡೆ ಹಾಗೂ ಸಣ್ಣ ಕೈಗಾರಿಕಾ ಸಚಿವ ಬಿ. ಎ. ಮೊಹಿದ್ದೀನ್‌ರವರು ಉಪಸ್ಥಿತರಿದ್ದರು.

ನಿತ್ಯ ಜೀವನ

○ ಸರಳತೆ ಇಲ್ಲದಿದ್ದರೆ ಬೇರೆಯವರ ಪ್ರೇಮ ಸಂಪಾದಿಸಲು ಸಾಧ್ಯವಿಲ್ಲ.

○ ಸಾವಿಗೆ ಅಂಜಿದರೆ ಬದುಕಿನ ಅರ್ಥವನ್ನು ಕಳೆದುಕೊಂಡಂತೆ.

● **ನಾಟೋಳನ (ಬೈತಡ್ಕ) ದೇವಮ್ಮ ಪೊಣ್ಣಪ್ಪ,**
ಮಡಿಕೇರಿ.

ಕೈಲ್‌ಮುಹೂರ್ತ ಆಚರಣೆ

ಕೊಡಗು ಗೌಡ ಮಿತ್ರ ಮಂಡಳಿ, ಹೆಚ್. ಎ. ಎಲ್. ಬೆಂಗಳೂರು ಇದರ ಆಶ್ರಯದಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ತಾ|| 21-09-97ನೇ ಭಾನುವಾರದಂದು ಶ್ರೀ ಮೊಟ್ರ ಈರಪ್ಪನವರ ಮನೆಯಲ್ಲಿ ಸುಭ್ರಮದಿಂದ ಆಚರಿಸಲಾಯಿತು. ಶ್ರೀಮತಿ ಮತ್ತು ಶ್ರೀ ಚೇಯಂಡಿರ ಬಸಪ್ಪ ಮತ್ತು ಶ್ರೀ ಅಚ್ಚಲಪ್ಪಡಿ ರಾಮಯ್ಯನವರನ್ನು ವಿಶೇಷ ಅತಿಥಿಗಳಾಗಿ ಆಹ್ವಾನಿಸಲಾಗಿತ್ತು. ಕಾರ್ಯಕ್ರಮದ ಪ್ರಯುಕ್ತ ಆಟೋಟಗಳನ್ನು ಏರ್ಪಡಿಸಲಾಗಿತ್ತು. ಎಚ್. ಎ. ಎಲ್. ಕಾರ್ಖಾನೆಯ ಸದಸ್ಯರು ತಮ್ಮ ಕುಟುಂಬ ಸಮೇತ ಹಾಜರಿದ್ದು ಸಮಾರಂಭಕ್ಕೆ ವಿಶೇಷ ಕಳೆಯಿತ್ತರು.

ಮುಂದಿನ ಸಾಲಿನ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಶ್ರೀ ಕಾಳೆಯಂಡ್ರ ಮಾಚಯ್ಯನವರನ್ನು ಹಾಗೂ ಕಾರ್ಯದರ್ಶಿಯಾಗಿ ಶ್ರೀ ಕಲ್ಲುಮುಟ್ಲು ಕುಶಾಲಪ್ಪನವರನ್ನು ನೇಮಿಸಲಾಯಿತು.

-: ಸೂಕ್ತಿ :-

○ ಕಷ್ಟಗಳು ಬರುವುದು ಸುಖಾಗಮನದ ಸೂಚನೆ.

_ಮಹಾತ್ಮಗಾಂಧಿ

ಗೌಡರ ವಿವಾಹ ಪದ್ಧತಿ

[ಮುಂದುವರಿದ ಭಾಗ]

ಬಣ್ಣಬಂಗಾರದ ಪೆಟ್ಟಿಗೆ ತುಂಬಿಸುವುದು

ಜೋಡಿ ತೆಂಗಿನ ಕಾಯಿಗಳನ್ನು ಹಿಡಿದುಕೊಳ್ಳುವದು. ಇನ್ನೊಂದು ಚೀಲ ಇಲ್ಲವೇ ಪೆಟ್ಟಿಗೆಯಲ್ಲಿ ಅಗತ್ಯವಿದ್ದಷ್ಟು ವೀಳ್ಯದೆಲೆ, ಇಡಿ ಅಡಿಕೆ, ಹೋಳಡಿಕೆ, ಎರಡು ಹರಿವಾಣ, ಒಂದು ಚೆಂಬು, ದೀಪಕ್ಕೆ ತೆಂಗಿನೆಣ್ಣೆ ಮತ್ತು ಚನುಚ ಮುಂತಾದವುಗಳನ್ನು ಹಿಡಿದುಕೊಳ್ಳುವುದು. ಮಡಿಲಕ್ಕಿ ಕಟ್ಟುವುದಕ್ಕಾಗಿ ಒಂದು ಚಿಕ್ಕಿನ ಚೌಕ, 2 ಸೇರು ಅಕ್ಕಿ, ಒಂದು ತೆಂಗಿನಕಾಯಿ ಒಂದು ಅಚ್ಚು ಬೆಲ್ಲ, ಎಲೆ ಅಡಿಕೆಯನ್ನು ಅದೇ ಪೆಟ್ಟಿಗೆಯಲ್ಲಿ ಹಾಕಿಕೊಳ್ಳುವುದು.

ಸೆರಗಿನ ಹಣ ಕಟ್ಟುವುದು :

ಬಣ್ಣ ಬಂಗಾರದ ಪೆಟ್ಟಿಗೆ ತುಂಬಿದ ನಂತರ ಸೋದರ ಮಾವನವರಿಗೆ ಸೆರಗು ಹಣ ಕಟ್ಟುವುದಕ್ಕೆ ಒಂದು ಚೆಂಬಿನಲ್ಲಿ ನೀರು ಮತ್ತು ಒಂದು ಹರಿವಾಣದಲ್ಲಿ ವೀಳ್ಯ ಕೊಟ್ಟು ಹೇಳುವುದು. ನೆಲ್ಲಕ್ಕಿ ಅಡಿಯಲ್ಲಿದ್ದ ವರನ ದಿಬ್ಬಣ ಹೊರಡುವ ತಯಾರು ನಡೆಸುವುದು. ಆಗ ನೆಲ್ಲಕ್ಕಿ ಅಡಿಯಲ್ಲಿ ತಂದೆ-ತಾಯಿ ಇಬ್ಬರೂ ಸೆರಗಿನ ಹಣವಾಗಿ ಮುಸುಕಿನ ವಸ್ತ್ರದ ಒಂದು ತುದಿಗೆ ಬೆಳ್ಳಿ ರೂಪಾಯಿಯನ್ನು ಕಟ್ಟುವುದು. ಇಲ್ಲಿ ಮನೆ ಯಜಮಾನತಿ ಮೊದಲು ಕಂಚಿಗೆ ಅಕ್ಕಿ ಹಾಕಿ, ದೀವಿಗೆಗೆ ಅಕ್ಕಿ ಹಾಕಿ, ಕಂಚಿಯನ್ನೆತ್ತಿ ಕಂಚಿಮಿಯ ಹಸ್ತ ಕೊಡುವುದು. ಕಂಚಿ ಹಿಡಿಯುವವಳು ಕೂಡಾ ಕಂಚಿಗೆ ಅಕ್ಕಿ ಹಾಕಿ ದೀವಿಗೆಗೆ ಅಕ್ಕಿ ಹಾಕಿ ಯಜಮಾನತಿ ಕೈಯಿಂದ ಕಂಚಿಯನ್ನು ತೆಗೆದುಕೊಳ್ಳುವುದು. [ಕಂಚಿ ಹಿಡಿಯುವ ಕಂಚಿಮಿ ಬಹಳಷ್ಟು ಜಾಗರೂಕತೆಯಿಂದಿರುವವಳಾಗಿರಬೇಕು ಮತ್ತು ದೀವಿಗೆ ನಂದುವುದಾಗಲಿ ಕಂಚಿಯ ಹಿಡಿತ ತಪ್ಪುವುದಾಗಲಿ ಆಗಬಾರದು.] ಈ ಸಮಯದಲ್ಲಿ ಮುಖ್ಯಸ್ಥರು/ಊರುಗೌಡರು "ಹತ್ತು ಕುಟುಂಬ ಹದಿನೆಂಟು ಗೋತ್ರದ ಒಕ್ಕಣೆ ಹೇಳಿ ದಿಬ್ಬಣವನ್ನು ಹೊರಡಿಸುವಂತೆವೆ" ಎಂದು ಹೇಳುವರು. ಕಂಚುಮಿಯು ಮುಂದಾಗಿಯೂ ಮತ್ತು ಮದುವಣ್ಣ ಆಡೋಳಿಯು ಹಿಂದಾಗಿಯೂ ಮನೆಯ ಮೆಟ್ಟಲನ್ನು ಬಲಗಾಲು ಇಟ್ಟು ದಾಟಿ ಮೇಲ್ಕಟ್ಟಡಿಗೆ ಬಂದಾಗ ಸೋದರ ಮಾವ ಕೂಡ ಮದುವಣ್ಣನ ಮುಸುಕಿನ ವಸ್ತ್ರದ ಇನ್ನೊಂದು ತುದಿಗೆ ಒಂದು ಬೆಳ್ಳಿ ರೂಪಾಯಿಯನ್ನು ಸೆರಗಿನ ಹಣವಾಗಿ ಕಟ್ಟುವುದು.

ದಿಬ್ಬಣ ಚಹಿಸಿ ಕೊಡುವುದು :

ಮೇಲ್ಕಟ್ಟಿನಡಿಯಲ್ಲಿ ವರನಿಗೂ ಆಡೋಳಿಗೂ ನಡುವೆ ಒಬ್ಬರು ನಿಂತು ಮೊದಲೇ ಆಯ್ಕೆ ಮಾಡಿದ ದಿಬ್ಬಣದ ಮುಖ್ಯಸ್ಥರಿಗೆ ಹೀಗೆ ಹೇಳುವರು.

1. ಮದುವಣ್ಣನ ಕಡೆಯಿಂದ ಹೋಗಲಿರುವ ದಿಬ್ಬಣದ ಮುಖ್ಯಸ್ಥರು ಯಾರಯ್ಯ? ಆಗ ಮುಖ್ಯಸ್ಥರು ನಾನಯ್ಯ ಎಂದು ಹೇಳುವುದು.

2. ನಾವು ಕೊಡುವ ದ್ವಿಹಸ್ತಗಳಿಗೆ ಚಾರು ಹಸ್ತಗಳನ್ನಾಗಿ ನಮ್ಮ ಸ್ವಾಧೀನ ತಂದೊಪ್ಪಿಸುವ ಮಹನೀಯರು ಯಾರಯ್ಯ ? ಈಗಲೂ ಮುಖ್ಯಸ್ಥರು ನಾವಯ್ಯ ಎಂದು ಹೇಳುವರು

3. ನಮ್ಮ ಕುಮಾರನಿಗೆ ಶೃಂಗರಿಸಿದ ವೈಯಾಭರಣಗಳಾಗಲಿ ಹಾರತೂಕದ ಚಿನ್ನಕ್ಕಾಗಲಿ, ಬೇಳೆ ತೂಕ ಬೆಳ್ಳಿಗಾಗಲಿ ಯಾವೊಂದು ಕುಂದು ಕೊರತೆ ಬಾರದಂತೆ ನಮ್ಮ ಸ್ವಾಧೀನಕ್ಕೆ ಚಾರು ಹಸ್ತಗಳನ್ನಾಗಿ ತಂದೊಪ್ಪಿಸುವಿರಾಗಿ ನಂಬುತ್ತೇವೆ, ಎಂದು ಹೇಳಿ "ಹತ್ತು ಕುಟುಂಬ ಹದಿನೆಂಟು ಗೋತ್ರ ಬಂಧು-ಬಾಂಧವರಲ್ಲಿ, ನೆಂಟರಿಷ್ಟರಲ್ಲಿ ಸರ್ವ ಸ್ವಜಾತಿ ಬಂಧುಗಳಲ್ಲಿ ಕೇಳಿ ದಿಬ್ಬಣವನ್ನು ದಿಬ್ಬಣದ ಮುಖ್ಯಸ್ಥರಿಗೆ ಸೀತಾನಳಿ ಚಪ್ಪರದ ಮೇಲ್ಕಟ್ಟಿನಡಿಯಲ್ಲಿ ವಹಿಸಿಕೊಡುವಂತೇವೆ" ಎಂದು ಮೂರು ಬಾರಿ ಹೇಳಿ ದಿಬ್ಬಣದ ಜೊತೆಯಲ್ಲಿ ಹೋಗಲಿರುವ ದಿಬ್ಬಣಸ್ಥರು ಕೂಡ ಹೋಗುವರು. ಹೋಗುತ್ತಿರುವಂತೆ ಒಕ್ಕಲೆಜಮಾನರು ದಿಬ್ಬಣದ ಮುಖ್ಯಸ್ಥರ ಹಸ್ತ ಮುಂಜಾಗ್ರತಾ ಕ್ರಮವಾಗಿ ದಾರಿ ಖರ್ಚಿಗೆ ಬೇಕಾದ ಹಣವನ್ನು ಕೊಡುವರು.

ಹಾಲು ಕೊಡುವುದು :

ಸ್ವಲ್ಪ ದೂರ ಸಾಗಿದ ನಂತರ ಕುರ್ಚಿ ಬೆಂಚುಗಳನ್ನು ಹಾಕಿ ಅಲ್ಲಿ ಮದುವಣ್ಣನ ಸಮೇತ ಎಲ್ಲರನ್ನು ಕುಳಿತುಕೊಳ್ಳಿಸಿ, ಮದುವಣ್ಣನಿಗೆ, ಮದುವಣ್ಣನ ತಾಯಿ ಒಂದು ಗ್ಲಾಸು ಹಾಲು ತಂದು ಕೊಡುವರು. ಅದನ್ನು ಅವರು ಕುಡಿದು ಹಿಂತಿರುಗುವಾಗ ಆ ಗ್ಲಾಸಿಗೆ ಎಲೆ, ಅಡಿಕೆ ಹಾಕಿ ಕೊಟ್ಟು ತಾಯಿಯ ಪಾದ ನಮಸ್ಕಾರ ಮಾಡಬೇಕು. ಉಳಿದ ದಿಬ್ಬಣದವರಿಗೂ ಅಲ್ಲಿಗೆ ಕಾಫಿ, ಪಾನಕ ಕಳುಹಿಸುವರು. ದಿಬ್ಬಣವು ಹೊರಟ ನಂತರ ಹಿಂತಿರುಗಿ ನೋಡಬಾರದು, ಎಂದು ಹಿಂದಿನ ಕಟ್ಟಳೆ ಆದುದರಿಂದ ದಿಬ್ಬಣದವರು ಏನಾದರೂ ವಸ್ತುವನ್ನು ಮರೆತಿದ್ದರೆ ಅವನ್ನು ನೆನಪಿಸಿ ಅವರು ಕುಳಿತ ಸ್ಥಳಕ್ಕೆ ತಲುಪಿಸುವುದಕ್ಕಾಗಿ ಈ ಕ್ರಮವನ್ನಿಟ್ಟುಕೊಂಡಿರುವರು. ದಿಬ್ಬಣವು ನಡೆದೇ ಸಾಗುತ್ತಿದ್ದರೆ ಮದುವಣ್ಣನಿಗೆ ಮನೆಯಲ್ಲಿ ಹಾಲು ಕೊಟ್ಟಂತೆ ದಾರಿಯಲ್ಲಿ ಸ್ವಜಾತಿ ಬಂಧುಗಳು ಕೂಡಾ ಹಾಲು ಕೊಡುವರು. ಅಲ್ಲಿಯೂ ಗ್ಲಾಸಿಗೆ ಎಲೆ ಅಡಿಕೆ ಹಾಕಿ ಪಾದ ನಮಸ್ಕಾರ ಮಾಡುವುದು.

[ಮುಂದುವರಿಯುವುದು]

ಟೀಕೆ-ಟಿಪ್ಪಣಿ

ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದ ವತಿಯಿಂದ ಕೈಲ್ ಮುಹೂರ್ತ

ಪ್ರಿಯ ಓದುಗರೆ,

ಒಂದು ಸಮಾಜ ಎಂದಾಕ್ಷಣ ಅಲ್ಲಿ ಎಲ್ಲಾ ಮನೋಭಾವದ ವ್ಯಕ್ತಿಗಳ ಸಮ್ಮಿಲನ ಸಾಮಾನ್ಯ ಇಲ್ಲಿ ಈ ಲೇಖನದ ಬರಹಗಳು ಯಾರಿಗೂ ವೈಯಕ್ತಿಕವಾಗಿ ಸಂಬಂಧಪಟ್ಟಿದ್ದಲ್ಲಾ. ನಮ್ಮ ಘನ ಸಮಾಜದಲ್ಲಿ ನೊಂದ ವ್ಯಕ್ತಿಗಳ ಸಂಖ್ಯೆ ಹೆಚ್ಚಾದಾಗ ಅದರಿಂದ ಉದ್ಭವಿಸಬಹುದಾದ ಅನಾಹುತಗಳ ಮುನ್ಸೂಚನೆಯಾಗಿ ಈ ಲೇಖನವನ್ನು ಓದುಗರು ನಮಗೆ ಕಳುಹಿಸಿದ್ದಾರೆ. ಅವರ ಮನದಾಳದ ವಿಚಾರಗಳನ್ನು "ಟೀಕೆ–ಟಿಪ್ಪಣಿ" ಯ ಅಂಕಣದಲ್ಲಿ ನಿಮ್ಮ ಮುಂದಿಡುತ್ತಿದ್ದೇವೆ.

—ಸಂ

ಜನಸಂಘಟನೆ, ಸೌಹಾರ್ಧತೆ, ಏಳಿಗೆಗೆ ದುಡಿಯಬೇಕಾದ ಕರ್ತವ್ಯ ಸಮಾಜ ಕಾರ್ಯ ಕರ್ತರದಾಗಿರುತ್ತದೆ. ಆದರೆ ಇಲ್ಲಿ ಕಳೆದ ಸೆಪ್ಟೆಂಬರ್ 21ರಂದು ಮಡಿಕೇರಿ ಗೌಡ ಸಮಾಜದ ಶಾಖೆಯಾದ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಸಂಪ್ರದಾಯದಂತೆ ಆಚರಿಸಲಾಯಿತು. ಆಚರಿಸಲಾಯಿತು ಎನ್ನುವುದಕ್ಕಿಂತ ನಡೆಸಿದರು ಎಂಬುವುದೇ ಸೂಕ್ತವೆನಿಸುತ್ತದೆ. ಮೈಸೂರಿನಲ್ಲಿ ನೆಲೆಸಿರುವ ನಮ್ಮ ಜನಾಂಗವನ್ನು ಒಗ್ಗೂಡಿಸಬೇಕಾದುದು ಈ ಸಮಾರಂಭದ ಮುಖ್ಯ ಗುರಿಯಾಗಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಈ ಶಾಖೆಯಲ್ಲಿ ಎಷ್ಟು ಆಡಳಿತ ಮಂಡಳಿಯವರು ಇದ್ದಾರೆ? ಅವರ ಬಂಧು ಮಿತ್ರರು ಮಾತ್ರ ಇಲ್ಲಿ ಸೇರಿ ಸಮಾರಂಭ ನಡೆಸಿದ್ದನ್ನು ನಾವು ಕಣ್ಣಾರೆ ಕಂಡು ವ್ಯಥೆಪಡಬೇಕಾಯಿತು. ಇದು ಒಂದು ಸಮಾಜದ ದೌರ್ಭಾಗ್ಯವೇ ಸರಿ. ಕೆಲವೇ ಸಿರಿವಂತ ವರ್ಗದ ಜನರಲ್ಲಿ ಮಾತ್ರ ಈ ಸಮಾರಂಭ ನಡೆದು ಬಡವರ್ಗ, ಮಧ್ಯಮ ವರ್ಗದ ನಮ್ಮ ಜನಗಳನ್ನು ಹೊರಗಿಡಲಾಗಿದ್ದುದು ದುಃಖದ ವಿಷಯವಾಗಿ ಪರಿಣಮಿಸಿದೆ. ಇಂತಹ ಸಮಾರಂಭಗಳು ಸೌಹಾರ್ಧಯುತವಾಗಿ ನಡೆಯುವುದು ಉತ್ತಮ. ಸಮಾಜದ ಹಿರಿಯ ಭಾಷಣಕಾರರು ಸಮಾಜಕ್ಕೆ ನಮ್ಮ ಜನಾಂಗ ಬಂದು ಸಹಕರಿಸುತ್ತಿಲ್ಲಾ ಎಂಬ ವಿಚಾರ ಇಳಿಯಬಿಟ್ಟರು. ಹೌದು, ಬರಬೇಕು ಯಾವ ರೀತಿಯಲ್ಲಿ? ಮನೆ ಮನೆಗೆ ಆಹ್ವಾನ ಪತ್ರಿಕೆ ಕಳುಹಿಸಬೇಕು. ಸಮಾರಂಭಗಳನ್ನು ಯಾವ ದಿನಾಂಕಗಳಲ್ಲಿ ನಿಗದಿ ಪಡಿಸಿದ್ದಾರೆ ಎಂಬುದು ತಿಳಿಯಬೇಕಾದರೆ ಆಹ್ವಾನ ಪತ್ರಿಕೆ ಸಹಾಯ ಮಾಡಬಲ್ಲದು. ಮೈಸೂರಿನ ಗೌಡ ವಿದ್ಯಾರ್ಥಿ ನಿಲಯದ ವತಿಯಿಂದ ನಮ್ಮ ಜನಾಂಗಕ್ಕೆ ಯಾವುದೇ ಸಹಾಯ, ಸೌಕರ್ಯ ಒದಗಿಸಿರುವರೆ? ಜನಗಳು ಸಮಾಜಕ್ಕೆ ಬಂದಾಗ ಅವರ ಪರಿಚಯ ಮಾಡಿಕೊಳ್ಳುವರೆ? ಆಸನಗಳನ್ನು ಸ್ವೀಕರಿಸಲು ಹೇಳುವರೆ? ಹಣವಂತ ಬಂದಾಗ ಅವರದೇ ಒಂದು ಗುಂಪಾಗಿ, ಮಧ್ಯಮ ವರ್ಗ ಮತ್ತು ಬಡವರ್ಗದವರು ಹಿಂದೆ ನಿಲ್ಲಬೇಕಾಗುತ್ತದೆ. ಅವರನ್ನು ವಿಚಾರಿಸುವವರೇ ಇಲ್ಲ. ಇದಕ್ಕಾಗಿ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದ ಉಪ ಸಮಿತಿ ಯಾವ ಕ್ರಮ ಕೈಗೊಂಡಿದ್ದಾರೆ? ಕೈಲ್ ಮುಹೂರ್ತ ಸಮಾರಂಭವೇನೋ ನಡೆಯಿತು. ಈ ಸಮಾರಂಭಕ್ಕೆ ಮೈಸೂರಿನ ನಮ್ಮ ಜನಾಂಗದ ಎಷ್ಟು ಮನೆಗಳಿಗೆ ಆಹ್ವಾನ ಪತ್ರಿಕೆ ತಲುಪಿದೆ? ಎಷ್ಟು ಜನಕ್ಕೆ ಇಂತಹ ಸಮಾರಂಭ ನಡೆಯುತ್ತಿದೆ ಎಂದು ತಿಳಿದಿತ್ತು? ಇಲ್ಲಿ ಆಡಳಿತ ವರ್ಗ ಏನು ಮಾಡುತ್ತಿದೆ? ಇದಕ್ಕಾಗಿ ಯಾವ ಕ್ರಮ ಕೈಗೊಂಡಿದ್ದಾರೆ?

ನಮ್ಮ ಜನಾಂಗದ ಒಂದು ಮಾಧ್ಯಮ (ಪತ್ರಿಕೆ) ಮೈಸೂರಿನಲ್ಲಿ ತಲೆ ಎತ್ತಿ ಹಲವು ತಿಂಗಳುಗಳೇ ಕಳೆದಿದೆ. ಹೀಗಿರುವಾಗ ಈ ಕೊಡಗು ಗೌಡ ವಿದ್ಯಾರ್ಥಿ ನಿಲಯದ ಸಂಘದ ವತಿಯಿಂದ ಪತ್ರಿಕೆಗೆ ಒಂದು ಆಹ್ವಾನ ಪತ್ರ ತಲುಪಿಲ್ಲದಿರಬಹುದೆ? ಹೀಗಾದಾಗ ಅದು ಸಂಘದ ದುರಾಡಳಿತವನ್ನು ಎತ್ತಿ ಹಿಡಿಯುದಂತೆ ಮಾಡುತ್ತದೆಯಲ್ಲವೆ? ಇಲ್ಲಿ ಸಂಘಟನೆ ಮುಖ್ಯವಾಗಿರುವಾಗ ಇವರ ಆಹ್ವಾನ ಪತ್ರಿಕೆಯನ್ನು ಅವರೇಕೆ ಪ್ರಸಾರ ಮಾಡಲಿಲ್ಲವೆಂಬುದು ಸೋಜಿಗದ ಸಂಗತಿ. ಅವರಿಗೆ ಆಹ್ವಾನ ಕಳುಹಿಸಿದ್ದಾರೆಯೇ ಎಂಬುದು ಸಂಶಯಾತೀತವಾಗಿದೆ.

ಜನ ಮನ ಗೆಲ್ಲಲು ಸಹಕರಿಸುವ ಈ ಮಾಧ್ಯಮವನ್ನು ಕಡೆಗಣಿಸಿರುವುದು ಸಮಾಜ ಸಂಘಟಕರ ಅವನತಿಯ ಲಕ್ಷಣಗಳು ಎನ್ನೋಣವೇ? ಹಾಗೆ ಈ ಸಮಾರಂಭದಲ್ಲಿ ಆಟೋಟ ಸ್ಪರ್ಧೆಗಳು ನಡೆದಂತೆ, ಇಲ್ಲೂ ರಾಜಕೀಯ ತೂರಿ ಬಂದ ಆರೋಪಗಳು ನಮಗೆ ತಲುಪಿದೆ. ಹಾಗೆ ಕೂಪನ್ ಎಂಬ ಊಟದ ಗುರುತಿನ ಚೀಟಿ ಸಹ ಅವಹೇಳನಕ್ಕೆ ಗುರಿಯಾಗಿದೆ. ಇದಕ್ಕೆ ಉತ್ತರ ಕೊಡುವವರಾರು? ಹೀಗಾಗಬಾರದು, ಮುಂದಿನ ಪೀಳಿಗೆಗೆ ಉತ್ತಮ ತಳಹದಿಯನ್ನು ಹಾಕುವ ಮಟ್ಟದಲ್ಲಿ ಮುನ್ನಡೆದರೆ ಅದು ಎಲ್ಲರ ಮನ ಗೆಲ್ಲಲು ಸಾಧ್ಯವಾದೀತು. ಎಂಬುವುದು ನಮ್ಮೆಲ್ಲರ ಅರಿಕೆ. ಇದರ ಬಗ್ಗೆ ಮಡಕೇರಿಯ ಗೌಡ ವಿದ್ಯಾ ಸಂಘದ ಪ್ರಧಾನ ಕಛೇರಿಯಿಂದ ಸೂಕ್ತ ಕ್ರಮ ಕೈಗೊಳ್ಳುವುದು ಅಗತ್ಯವೆನಿಸುವುದಿಲ್ಲವೇ?

(ನೊಂದ ಗೌಡ ಬಂಧುಗಳ 30 ಮಂದಿ ಸಹಿ ಇದೆ)

ನಿಮ್ಮ ಪತ್ರಗಳು

ಗೌಡರ ಮೂಲ

ಮಾನ್ಯರೆ,

"ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರಿಗೆ ತಿಳಿಯಪಡಿಸುದೇನೆಂದರೆ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಜನಾಂಗ ಮತ್ತು ಇತರೆ ಭಾಗದಲ್ಲಿರುವ ಗೌಡ ಜನಾಂಗದ ಚರಿತ್ರೆಯು ತುಂಬಾ ಪುರಾತನತೆಯನ್ನು ಹೊಂದಿರುವುದು. ನನ್ನ ದ್ವಿತೀಯ ವರುಷದ ಕನ್ನಡ ಎಂ. ಎ. ಮೌಖಿಕ ಪರೀಕ್ಷೆಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಂಪಾ ನಾಗರಾಜಯ್ಯನವರು ಕೊಡಗಿನಲ್ಲಿರುವ ಶಾಸನದ ಬಗ್ಗೆ ಏನಾದರು ಅಧ್ಯಯನ ಮಾಡಿರುವಿರಾ ಎಂಬುದಾಗಿ ಅವರು ನನ್ನ ಪ್ರಶ್ನಿಸಿದರು. ಯಾವ ಶಾಸನದ ಬಗ್ಗೆ ಗೊತ್ತಿದೆಯೆಂದು ಕೇಳಿದರು ನನಗೆ ಅದರ ಪರಿಚಯ ಸ್ವಲ್ಪ ಕಡಿಮೆಯಾಗಿತ್ತು. ಇತ್ತೀಚೆಗೆ ಕರ್ನಾಟಕ ಗೆಜೆಟೀಯರ್‌ನಲ್ಲಿ ಕೊಡಗಿನಲ್ಲಿ 23 ಶಾಸನಗಳು ಪ್ರಮುಖವಾದವುಗಳು ದೊರೆತಿರುವುದು ಮತ್ತು ಗಂಗರಾಜನಾದ ಕೊಂಗುಣಿವರ್ಮನ ಕಾಲದ ಶಾಸನ ಮಡಿಕೇರಿ ಭಾಗಮಂಡಲ, ಸೋಮವಾರಪೇಟೆ ಮುಂತಾದ ಕಡೆಗಳಲ್ಲಿ ದೊರೆತಿರುವುದರಿಂದ ಮತ್ತು ಅಲ್ಲಿ ಗೌಂಡ ಎಂಬ ಪದ ಹೆಸರಿನೊಡನೆ ಸೂಚಿತವಾಗಿರುವುದರಿಂದ ಆ ಕಾಲಕ್ಕೂ ಹಿಂದಿನಿಂದಲೂ ಗೌಡ ಜನಾಂಗದವರಿದ್ದರೆಂಬುದಾಗಿ ತಿಳಿದು ಬರುತ್ತೆ. ಕ್ರಿ.ಶ. 466 ರಷ್ಟು ಹಿಂದಿನ ಶಾಸನದಲ್ಲಿ ಶಾಸನ ಬರಹಗಾರರು ಬರೆದಿರುವ ಮಾಹಿತಿಯಿಂದ ತಿಳಿದು ಬರುತ್ತದೆಯಲ್ಲದೆ ಗೌಡ ಜನಾಂಗವು ಕನ್ನಡ ಮೂಲದವರೆ ಆಗಿದ್ದು ಪ್ರಾದೇಶಿಕ ಭಿನ್ನತೆಯಿಂದ ಅರೆಭಾಷೆಯಾಗಿ ಮಾರ್ಪಾಡಾಗಿರುವುದು. ಹಳೆಗನ್ನಡದಂತೆ ಅರ್ಧಕ್ಷರ ಬಳಕೆ ಇದೆ.

ಎಂ. ಸಿ. ಮಾದಯ್ಯ, ಬೆಂಗಳೂರು

ಖಡ್ಗಕ್ಕಿಂತ ಲೇಖನಿಯೇ ಮೇಲು

ಮಾನ್ಯರೆ,

"ಖಡ್ಗಕ್ಕಿಂತ ಲೇಖನಕ್ಕೆ ಶಕ್ತಿ ಹೆಚ್ಚು" ಎಂಬ ನಾಣ್ನುಡಿ ನಿಮ್ಮ ಪತ್ರಿಕೆಯನ್ನು ಓದುವಾಗ ಜ್ಞಾಪಕಕ್ಕೆ ಬಂತು. ಕಾರಣವೇನೆಂದರೆ ಮೈಸೂರಿನ ಧನು ಚೆರಿಯಮನೆರವರು ದಿ॥ 17–8–97ರಲ್ಲಿ ಮೈಸೂರಿನ ಗೌಡ ವಿದ್ಯಾರ್ಥಿ ಭವನದಲ್ಲಿ ಮಹಿಳಾ ಸಂಘಟನೆಯನ್ನು ಏರ್ಪಡಿಸಿದ್ದುದು ಶ್ಲಾಘನೀಯ ಸಂಗತಿ. ಇದಕ್ಕೆ ಕಾರಣ "ಕೊಡಗು ಸಂಗಾತಿ"ಯ ಲೇಖನಗಳು ಹಾಗೂ ಸಂದರ್ಶನದ ಫಲವೆಂದು ನನ್ನ ಅನಿಸಿಕೆ. ಗೌಡ ಮಹಿಳೆಯರನ್ನು ಹೊಡೆದೆಬ್ಬಿಸುವ ಕೆಲಸವನ್ನು "ಕೊಡಗು ಸಂಗಾತಿ" ಮಾಡಿದೆ.

● **ಪೂಜಾರಿ ನೊಣ್ಣಪ್ಪ,** ಅಧ್ಯಕ್ಷರು, ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು.

ಹೆಚ್ಚು ಪ್ರಾಧಾನ್ಯತೆ ಕೊಡಿ

ಮಾನ್ಯರೇ,

"ಕೊಡಗು ಸಂಗಾತಿ" ಪ್ರಥಮ ಸಂಚಿಕೆಯಲ್ಲದೆ 8ಮತ್ತು 9ನೇ ಸಂಚಿಕೆಗಳು ನನ್ನ ಕರಗತವಾಗಿವೆ. ಪತ್ರಿಕೆ ನಡೆಸುವ ದೊಡ್ಡ ಸಾಹಸಕ್ಕೆ ಕೈಯಿಕ್ಕಿದ್ದೀರಿ. ನಿಮಗೆ ಶುಭವಾಗಲಿ ಎಂದು ಹಾರೈಸುವೆ. ಗೌಡ ಜನಾಂಗದ ಮುಖವಾಣಿಯಾಗಿ ಬೆಳಕು ಕಾಣುತ್ತಿರುವ ಪತ್ರಿಕೆಗೆ "ಗೌಡ-ಸಂಗಾತಿ" ಎಂದು ಹೆಸರಾಗುತ್ತಿದ್ದಿದ್ದರೆ ಚೆನ್ನಾಗಿರುತ್ತಿತ್ತಲ್ಲವೇ? ಅದೇನೇ ಇದ್ದರೂ ಹೆಸರು ಮುಖ್ಯವಾಗಲಾರದು. ನಿಮ್ಮ ಸಾಧನೆ ಮುಖ್ಯವಾದೀತು. ಗೌಡ ಸಂಸ್ಕೃತಿಯ ಜೊತೆಗೆ ಬಹಳ ಮುಖ್ಯವಾಗಿ ನಮ್ಮ ಜನರು ಮರೆಯುತ್ತಿರುವ [ಕೀಳರಿಮೆಯಿಂದ] ಗೌಡ ಕನ್ನಡಕ್ಕೆ ಇನ್ನೂ ಹೆಚ್ಚು ಪ್ರಾಧಾನ್ಯ ಕೊಡಬೇಕಾಗಿ ಕೋರಿಕೆ.

● **ಪಿ. ಜಿ. ಅಂಬೆಕಲ್,** ಚೆಟ್ಟಳ್ಳಿ

ಗೌಡ ಜನಾಂಗವೇ ಒಂದಾಗಲಿ

ಮಾನ್ಯರೆ,

ಒಂದು ಜನಾಂಗದ ಬಾಳಿನ ಬೆಳಕಾಗಿ ಗೊತ್ತಿಲ್ಲದೆಯೇ ಆಗಮಿಸಿ "ಸಂಸ್ಕೃತಿಯ ಬೆಳವಣಿಗೆಗೆ" ವಿಶಿಷ್ಟ ಸೇವೆ ಸಲ್ಲಿಸುತ್ತಿರುವ ನಿಮ್ಮ ಈ ವಿಶೇಷ ಗುರಿ ಸಾಧನೆಯು ಈಡೇರಲು 'ಇಡೀ ಗೌಡ ಜನಾಂಗವೇ ಒಂದಾಗಲಿ' ಇದರ ಫಲವಾಗಿ 'ಅರೆಭಾಷಿಕ ಸಾಹಿತ್ಯ ಅಕಾಡೆಮಿ' ಎಂಬುದರ ಹುಟ್ಟಿಗೆ ಕಾರಣವಾಗಲೀ ಎಂದು ಆಶಿಸುತ್ತಾ ನಿಮ್ಮ ಈ ಪ್ರಯತ್ನಕ್ಕೆ ಕುಲಗುರುವಿನ ಅನುಗ್ರಹ ದೊರಕಲಿ ಎಂದು ಪ್ರಾರ್ಥಿಸುತ್ತೇನೆ. ಮತ್ತು ಅರೆಭಾಷಿಕ ವಿಭಾಗ ಇನ್ನಷ್ಟು ಹೆಚ್ಚಿನ ಪುಟಗಳಲ್ಲಿ ಮೂಡಿಬರಲಿ. ಗೌಡ ಜನಾಂಗದ ಪ್ರಸಿದ್ಧ ವ್ಯಕ್ತಿಗಳ ಪರಿಚಯ ಇನ್ನಷ್ಟು ಆಗಲಿ, ಯುವ ಜನತೆಗೆ ಆದರ್ಶವಾಗಿ ಪರಿಣಮಿಸಲು ಸಹಕಾರಿಯಾಗುವಲ್ಲಿ ಸಂಶಯವಿಲ್ಲ. ಆದ್ದರಿಂದ ಜನಾಂಗದಲ್ಲಿ ವಿಶಿಷ್ಟ ಸಾಧನೆಗೈದವರ ಜೀವನ, ಪರಿಚಯ ಇನ್ನಷ್ಟು ಆಗಲಿ. ಯುವ ಜನತೆಗೆ ಆದರ್ಶವಾಗಿ ಪರಿಣಮಿಸಲು ಸಹಕಾರಿಯಾಗುವಲ್ಲಿ ಸಂಶಯವಿಲ್ಲ. ನಮ್ಮದು ಎಂಬ ಅಭಿಮಾನ ಎಲ್ಲರ ಮನದಲ್ಲಿ ಮೂಡುವಂತಾಗಲು ಈ ಪತ್ರಿಕೆ ಹೆಚ್ಚು ಜನಪ್ರಿಯವಾಗಲಿ ಎಂದು ಹಾರೈಸುವ.

● **ಸೌಮ್ಯ,** ಮರಗೋಡು

ಅರೆ ಭಾಷಿಕ ವಿಭಾಗ

ಸೋಮಣ್ಣನ ಆಸೆ....!

ಮೊನ್ನೆ ಸೋಮಣ್ಣ ಕಾಂಬಕೆ ಸಿಕ್ಕಿತ್, ಅಂವ ನನ್ನ ನೋಡ್ತೋ ಇಲ್ಲೆಯೋ "ಗೊಳೋಂತ" ಮರ್‌ಡಿಕೆ ಶುರ್‌ಮಾಡ್ತ್! ಅರರೇ ನಿಂಗೇನಾತ್ ಮಾರಾಯ? ಒಳ್ಳೆ ಗುಂಡಕಲ್ ಇದ್ದಂಗೆ ಒಳ. ಹೆಣ್ಣ್ ಇಳ್ಸಿ ಕಾಕನ (ಕೆಲವು!) ಮರ್‌ಟವಲ್ಲ ಹಂಗೆ ಮರ್‌ಡ್ತಾ ಒಳಲ್ಲಾ? ಏನ್ ವಿಷಯ? ಒಮ್ಮೆ ಹೇಳ್. ಕಂಡೊವು ಏನ್ ಹೇಳಿಕಿಲ್ಲೆಂತ ಕೇಳ್ದೆ. ಅಂವಂಗೆ ಆಗ ಹೇಳಿಕೆ ಬಾಯಿ ಬಾತ್ಲೆ. ಅಂತೂ ನಾ ಒತ್ತಾಯ ಮಾಡ್ದೆ. ಆಗ ಅಂವ ಹೇಳೊಕ್‌ತ ಪೇಚಾಡ್ದೆ, ಹೇಳ್ದುಲೆ. ಒಮ್ಮೆ ಬಾಯಿ ಬುಟ್ಟತ್. ಮಾತ್ ಹೊರ್ಟತ್ಲೆ. ಕಡೇಗೆ ಹೇಳ್ತ್. "ನಂಗೆ ಯಾರೂ ಹೆಣ್ಣ್ ಕೊಡ್ದುಲೆ, ನಾ ಈಗ ಒಂಟಿಯಾಗ್ ಬುಟ್ಟೊಳೆ." ನಿಂಗೆ ಹಂಗೇ ಆಕುತ ನಾ ಹೇಳ್ದೆ. "ನಿನ್ನ ದಮ್ಮಯ್ಯತ ಹೇಳಿನೆ. ಹಂಗೆ ಹೇಳ್‌ಬೆಡ. ಎಲ್ಲಾರ್ ಒಂದ್ ಹೆಣ್ಣ್ ಕೊಡ್ಸುತ" ಹೇಳ್ತ್. ಆಗ ನಾ ಹೇಳ್ದೆ ಮೊಕಲಿ ಕಣ್ಣಿದ್ದಂವ ನಿಂಗೆ ಹೆಣ್ಣ್ ಕೊಡಿಕಿಲೆ. ಯಾಕಂತೇಳಿರೆ ನೀ ಕಮ್ಮಿಂತೇಳಿರೆ ವರ್ಷಕ್ಕೆ ಇಪ್ಪತ್ ಮನೆಗೆ ಹೆಣ್ಣ್‌ನೋಡಿಕೆ ಹೋಗಂವ. ಒಮ್ಮೆ ನಿಂಗೆ ಕೋಳಿ ತಿಂದ್ ತಿಂದ್ ಉಷ್ಣ ಹತ್ತಿ ಕಂಡ್‌ದ ಗ್ಯಾನ ಉಟ್ಟಾ? ಆಸ್ಪತ್ರೆಲಿ ವಾರಗಟ್ಟಲೆ ಬಿದ್ದಿದ್ದಲ್ಲ, ಅದೆಲ್ಲಾ ಮರ್‍ತ್ತೋತಾ? ಇಷ್ಟೆಲ್ಲಾ ಆದರೂ ನೀ ಮೊದುವೆ ಆನೇಂತೇಳಿ ಯಾರಿಗೂ ಒಪ್ಪಿಗೆ ಕೊಟ್ಟತ್ಲೆ. ಹೆಣ್ಣ್ ನೋಡಿಕೆ ಹೋದಲ್ಲಿ ಲಾಯ್ಕ ಕುತ್ತಿಗೆ ಮಟ್ಟ ಮುಕ್ಕುದು, ಯಾವುದಕ್ಕೂ ನಾ ಆಮೇಲೆ ಹೇಳಿನೇಂತ ಹೇಳಿ ಬಂದವ ಇನ್ನೊಂದು ಮನೆಗೆ ನುಗ್ಗುದು. ಮತ್ತೆ ಆ ಕಡೆ ತಲೆ ಹಾಕುದ್ಲೆ. ಆ ಗೂಡೆ ಹಂಗೆ, ಈ ಗೂಡೆ ಹಿಂಗೇತ ಸೂನೆ ಹೇಳಿಕಂಡೇ ತಿರ್‌ಗಿಕಂಡ್ ಇರಂವ. ಕಡೆಗೆ ಚಾಕರಿಲಿ ಇರೊ ಗೂಡೆನೇ ಬೇಕ್‌ಂತ ಹಠ ಮಾಡ್ದಂವ. ನಿನ್ನ ದವಡೆದ್ ಹಲ್ಲ್ ಉದುರಿರೂ ನಿಂಗೆ ಬುದ್ಧಿ ಬಾತ್ಲೆಂತ ನಾ ಸರಿಯಾಗಿ ದಬಾಯ್ಸಿದೆ.

"ಹೆಂಗಾರ್ ಆಗಲಿ, ಚಾಕರಿ ಗೂಡೆನೇ ಬೇಕ್‌ಂತ ಸೋಮಣ್ಣ ಹಠ ಮಾಡಿಕೆ ಶುರ್ ಮಾಡ್ತ್.

ಆಗನಾ ಹೇಳ್ದೆ :

ನೋಡು ಸೋಮಣ್ಣ ಗಂಡ ಹೆಣ್ಣ್ ಇಬ್ಬರೂ ಚಾಕರ್‍ಲಿ ಇರೋವು ಹೇಂಗೆ ಒಳೊ? ಬರೀ ಹೆಸ್‌ರ್‌ಗೆ ಮಾತ್ರ ಚಾಕರಿ, ಪಾಪ! ಮಕ್ಕ ಮಾತ್ರ ತಬ್ಬಲಿಗಳಂಗೆ. ಆ ಮಕ್ಕಳಿಗೆ ಊಟ ಕೊಡೊವು ಇಲ್ಲೆ. ಪಾಠ ಹೇಳೋವು ಇಲ್ಲೆ. ಅಪ್ಪಂಗೂ ಅರ್ಜೆಂಟ್ ಅಮ್ಮಂಗೂ ಅರ್ಜೆಂಟ್. ಈ ಅರ್ಜೆಂಟ್ ಯಾಕೆ? ಸಂಪಾದನೆ ಮಾಡಿಕೆ. ಆ ಸಂಪಾದನೆನ ಅನುಭವಿಸಿಕ್ಕೂ ಸಮಯ ಇಲ್ಲೆ!! ವರ್ಷಕ್ಕೊಮ್ಮೆ ವರ್ಗಾವಣೆ. ಹೆಣ್ ಉಪ್ಪಿನಂಗಡಿಗೆ ವರ್ಗಾಗಿ ಹೋದರೆ ಗಂಡ ನೆಲ್ಲಿಹುದಿಕೇರಿಗೆ. ಮತ್ತೊಂದ್ ವರ್ಷ ಹೆಣ್ಣ್ ಕನ್ಯಾಕುಮಾರಿಗೆ, ಗಂಡ ಕಾಶ್ಮೀರಕ್ಕೆ ವರ್ಗ. ಈ ವರ್ಗಾವಣೆನ ರದ್ದ್ ಮಾಡ್ಸಿಕೆ ಲಂಬ ಕೊಡೊಕು. ಕೆಲವೊಮ್ಮೆ ಲಂಚ ಕೊಟ್ಟರೂ ವರ್ಗಾವಣೆ ರದ್ದ್ ಆಕಿಲೆ. ಅಂತೂ ಇಂತೂ ಅವು ಹೇಳ್ದ ಊರಿಗೆ ಗಂಟ್ ಮೂಟೆ ಕಟ್ಟೆಕಂಡ್ ಬಾಡಿಗೆ ಮನೆ ಹುಡುಕಿ ಕಡೇಗೆ ಯಂಥದೋ ಮನೆ ಹಂಗೆ ಇರೋ ಮನೆಗೆ ನುಗ್ಗಿ ಲಾರಿ ಬಾಡಿಗೆ ಕೊಟ್ಟ್ ಬಾಡಿಗೆ ಮನೆಗೆ ಅಡ್ವಾನ್ಸ್‌ಕೊಟ್ಟ್ ಆಕನ ಇವರ ಏಳ್ ಜೋಡಿ ಚಕ್ಕಳ ಎದ್ದೋದೆ. ಅಯ್ಯಯ್ಯೋ ಮಕ್ಕಳ ವಿದ್ಯಾಭ್ಯಾಸ? ಸರಿ, ಆ ಮಕ್ಕಳ ಗೋಳು ಯಾರಿಗೆ ಆದು? ನೀವು ಸಾ ಗ್ಯಾನ ಮಾಡಿ. ಚಾಕರ್‍ಲಿರೋ ಸುಖ ಜೀವನ ಇದೆನಾ?

ಪ್ರತೀ ವರ್ಷ ಬಾಡಿಗೆ ಮನೆ ಹುಡುಕುದು. ಸಂಪಾದನೆ ಮಾಡ್ದ ಹಣನೆಲ್ಲಾ ಲಂಚಕ್ಕೆ, ಬಾಡಿಗೆಗೆ, ಅಡ್ವಾನ್ಸ್‌ಗೆ, ಕಾಯಿಲೆಗೆಂತ ಖರ್ಚು ಮಾಡಿ ಮಾಡಿ ಕಡೇಗಾಲಕ್ಕೆ ನಿವೃತ್ತಿ ಆಕನ "ಹಲ್ಲ್ ಕಟ್ಟಿಸಿಕಂಬಕ್ಕೂ" ಕಾಸ್ ಇರಿಕಿಲ್ಲೆ. ಇನ್ನ್ ಸ್ವಂತ ಮನೆ ಕಟ್ಟೆಕಂಬೊದು?!?

ಸೋಮಣ್ಣಾ ನೀ ಇನ್ನಾರ್ ಗ್ಯಾನ ಮಾಡ್. ಓದಿದ ಗೂಡೆ ಚಾಕರಿ ಇಲ್ಲದೆ ಮನೇಲಿ ಇದ್ದರೆ ಅಂಥವ್ಳನ್ನೇ ಮೊದುವೆ ಆಕು. ಒಬ್ಬ ಚಾಕರ್‍ಲಿ ಇದ್ದರೆ ಸಾಕ್. ತೋಟ ತೋಡಿಕೆ ಇದ್ದರೆ ಚಾಕರಿಗೆ ಯಾಕೆ ಹೋಕು?

ಚಾಕರ್‍ಲಿ ಇರಂವ ಚಾಕರ್‍ಲಿರೋ ಗೂಡೆನೇ ಹುಡಿಕಿರೆ ಮನೆಲೇ ಇರುವ ಗೂಡೆಗಳ ಕಥೆ ಏನಾಕು? ನಿರುದ್ಯೋಗ ಇರುವ ಈ ಕಾಲಲಿ ಯುವ ಜನಾಂಗ ಸೊಲ್ಪ ಗ್ಯಾನ ಮಾಡೋಕು. ಸೋಮಣ್ಣನಂಥವುಕೆ ನಿಮ್ಮಂಥವು ಸೊಲ್ಪ ಬುದ್ಧಿ ಹೇಳೊಕು. [ಸೋಮಣ್ಣ ಕಾಲ್ಪನಿಕ ಹೆಸರ್]

● **ಬಿ. ಆರ್. ಜೋಯಪ್ಪ,** ಮದೆ.

ಸಂತೆಯಲ್ಲಿ ಕೇಳಿದ್ದು

ನೇರಳೆ ಹಣ್ಣಾತ್
ಅಣ್ಣಂಗೆ ಹೆಣ್ಣಾತ್
ಮಲ್ಲಿಗೆ ಹೂವಾತ್
"ಮಳ್ಳಿ" ಗಂಡಾತ್
ದಿಬ್ಬಣ ಹೋಗ್ಯಾತ್
ಹೆಣ್ಣ್ ತಂದಾತ್

● **ಶ್ರೀ ಕುಲ್ಲಚನ ಕಾರ್ಯಪ್ಪ,**
ಕುಂಬಳದಾಳು

ಹಾಸಿಗೆ ಇದ್ದ ಷ್ಟ್ ಕಾಲ್ ನೀಂಡಕು

ಭರ್‌ಂತ ಶಬ್ದ ಮಾಡಿಕಂಡ್ ಒಂದು ಫಿಯಟ್ ಕಾರ್ ಬಂದದೆ. ರಂಗೋಲಿ ಬುಡ್ತಿದ್ದ ಚೆಲುವೆ ಎದ್ದ್ ಒಂದ್ ಹೆಜ್ಜೆ ಹಿಂದೆ ಹಾಕಿದೆ ಅಷ್ಟೆ, ಕೈಲಿದ್ದ ಚಿಪ್ಪಿಂದ ರಂಗೋಲಿ ಪುಡಿಯೆಲ್ಲಾ ಕಾರೊಳಗಿದ್ದವ್ನ ಮುಖಕೆಲ್ಲಾ ಹಾರಿಬುಟ್ಟದೆ. ಅದರೊಳ

ಬೋಳನ ಪ್ರೇಮು, ಸೋಮವಾರಪೇಟೆ

ಗಿದ್ದಂವ ಮದುವೆಯಾಕೆಂತ ಗೂಡೆ ನೋಡಿಕೆ ಹೊರ್‌ಟದ್ದದೆ. ಬೆಳಿಗ್ಗೆ ಬೇರೆ. ಅವಂಗೆ ಸಿಟ್ಟ್ ಬಂದ್ ಅವ್ಳಿಗೆ ಬೈಯ್ಯೋ ಕೂಂತ ಕಣ್ಣುಜ್ಜಿಕಂಡ್ ನೋಡ್ದೆ ಅಷ್ಟೆ. ತನ್ನ ತಾನೇ ಮರ್ತ್ ಬುಟ್ಟದೆ.

ಹಾದಿ ಹಕ್ಕಲೆ ಒಂದ್ ಸಣ್ಣ ಹಂಚ್‌ನ ಮನೆ. ಅದರ್ಲಿ ಒಟ್ಟ್ ಏಳ್ ಜನ. ಚೆಲುವೆ ಮೂರ್‌ನೆಯುವ್ಳು. ಹೆಸರಿಗೆ ತಕ್ಕಂಗೆ ಅವ್ಳು ಸುಂದರಿ. ಅವ್ಳ ಬಾರಿ ಕನಸ್‌ಕಾಂಬವ್ಳು. ಅವ್ಳಗೆ ಮೊದ್ಲ ಒಬ್ಬಣ್ಣ, ಒಬ್ಬಕ್ಕ, ಅವ್ಳು ಕೆಳ್‌ಗೆ ಒಬ್ಳ್ ತಂಗಿ ಮತ್ತೆ ಇನ್ನೊಬ್ಬ ತಮ್ಮ. ಮನೆಲಿ ಸ್ವಲ್ಪ ಬಡತನ. ಆದ್ರೆ ಕನಸ್ ಕಾಂಬಕೆ ಬಡಂವ ಶ್ರೀಮಂತತ ಉಟ್ಟಾ ?

ಚೆಲುವಿನ ಅಣ್ಣ ಒಬ್ಬ ದೂರದ ಊರ್‌ಲಿ ಇದ್ದದೆ. ಚೆಲುವೆನ ಅಕ್ಕ ಚೆಲುವೆಗಿಂತ ಸ್ವಲ್ಪ ರೂಪಲಿ ಕೆಳಗಿದ್ದದೆ. ಹಂಗಾಗಿ ಮದುವೆಗೆ ಕೇಳವು ಚೆಲುವೆನ ಕೇಳ್‌ತ್ತಿದ್ದವೆ. ಆದ್ರೆ ಚೆಲುವೆ ಅಂತಿಂತ ವನೆಲ್ಲ ಮದುವೆಯಾಕೆ ಒಪ್ಪಕೊಲಾ ? ವಿಚಿತ್ರ ಕನ್ಸ್ ಕಟ್ಟುವ ಗೂಡೆ. ತನ್ನ ಗಂಡ ಹಂಗಿರಕು ಹಿಂಗಿರಕೂತ.

ಚೆಲುವೆ ತಾನು ಬಾರಿ ಪೊರ್ಲು ನನಗಿಂತ ಮೇಲ್ ಯಾರೊಳೊ ಅಂತ ತನಗೆ ತಾನೇ ಬೀಗ್‌ತಿತ್ತ್. ಜೊತೆಗೆ ಅವ್ಳು ಬಾರಿ ಬಾರಿ ಕೆಲ್ಸಗಾರ್ತಿ. ಬೆಳಿಗ್ಗೆ ತನ್ನ ಕೆಲ್ಸ ಮುಗ್ಸಿ ಉಂಬಕೆ ಕೂರ್‌ಕನ 9 ಗಂಟೆ ಆಗ್ತಿತ್. ಮತ್ತೆ ತೋಟಕೊ, ಗದ್ದೆಗೊ ಹೋದರೆ ಮಧ್ಯಾಹ್ನ 1 ಗಂಟೆಗೆ ಉಂಬಕ್ಕೆ ಬರ್ತಿತ್ತ್. ಹಿಂಗೆ ಇವ್ಳು ಎಲ್ಲದರ್ಲೂ ನಿಪುಣೆ.

ಇತ್ತ ಸುಂದರ ಸುಂದರನೇನು ಅಲ್ಲ. ಆದ್ರೆ ಅಂವ ಬಾರಿ ಶ್ರೀಮಂತರ ಒಬ್ಬನೇ ಮಂಙ್ಞ, ಅಂವಂಗೆ ಸ್ವಲ್ಪ ಜಂಬ ಬೇರೆ. ನಾನು ಈ ಊರ್‌ಲಿ ಬಾರಿ ಶ್ರೀಮಂತ, ನನ್ನ ಶ್ರೀಮಂತಿಕೆಗೆ ತಕ್ಕಂಗೆ ಗೂಡೆನೆ ಅದರ್ಲೂ ತುಂಬಾಪೊರ್ಲ್‌ನ ಗೂಡೆನತರಕೂಂತ ಆಸೆ. ಹಂಗೆ ಯಾರೊ ಹೇಳಿ ಕಳ್ಸಿದ್ದವೆ. ಒಂದು ಬಾರಿ ಪೊರ್ಲ್‌ನ ಗೂಡೆ ಉಟ್ಟೊಂತ ಹಂಗೆ ಕಾರ್‌ಲಿ ಅಂವ ಅವ್ವನ ಕರ್‌ಕಂಡ್ ಹೊರ ಟದ್ದದೆ.

ಚೆಲುವೆ ಯಾಗೋಳು ಬೆಳಿಗ್ಗೆದ್ದಂಗೆ ಹಾದಿಗೆ ಹೋಗಿ ರಂಗೋಲೆ ಬುಡ್ದ್. ಅದು ಅವ್ಳು ಹತ್ರದ ಮನೆಯುವ್ರಿಂದ ಕಲ್ತಿದ್ದದೆ. ಹಂಗೆ ಆ ದಿನನೂ ಬುಡಿಕೆ ರಸ್ತೆಗೆ ಹೋಗಿದ್ದದೆ ಅವ್ಳಗೇನು ಗೊತ್ತು ತನ್ನ ಕನ್ಸ್‌ನ ರಾಜ ಸಿಕ್ಕಿದೇಂತ.

ಸುಂದರ ಬುಟ್ಟ ಕಣ್ಣ್ ಬುಟ್ಟಂಗೆ ನೋಡಿಕಂಡೆ ಬಾಕಿ. ಇದರ್ನ ನೋಡಿ ಅವ್ವ, ಏಯ್ ಏಕೆ ಹಿಂಗೆ ನೋಡ್ತೊಳ ? ಅದ್ಯಾರೊ, ಯಾವ ಜಾತಿನೊ ? ಅಂತ ಕೇಳ್ದೆ. ಅಷ್ಟರವರೆಗೂ ತನ್ನ ಕನ್ಸ್‌ನ ರಾಣಿ ಇವ್ಳೇ ! ಇವ್ಳನ್ನೇ ಮದುವೆ ಯಾದ್ರೆ ಹೆಂಗೇಂತ ಗ್ಯಾನ ಮಾಡ್‌ತ್ತಿ ದ್ದಂವ ಅವ್ವನ ಮಾತ್‌ಂದಾಗಿ ಕನ್ಸ್‌ಂದ ಹೊರಗೆ ಬಂದ್ ಅವ್ವನೊಟ್ಟಗೆ ಹೇಳ್ದೆ. ಅವ್ವ ನಾನು ಇವ್ಳ ಮದುವೆಯಾನೆತ. ಅವ್ವಂಗೆ ಮೊದ್ಲ್ ಇಷ್ಟ ಆಗದಿದ್ದರೂ ಹೆದರಿ ನಿಂತಿದ್ದ ಗೂಡೆನ ನೋಡಿ, ಅದು ಸಾದ್ ಗೂಡೆ ಕಂಡದೆ ಅಂತ ಕೊನೆಗೆ ಒಪ್ಪಿಕಂಡದೆ

ಒಂದು ವಾರದೊಳಗೆ ಮದುವೆಯಾತ್. ಚೆಲುವೆನವ್ಕೆ ಅಷ್ಟೇನು ನೆಂಟರ್ ಇತ್ಲೆ. ಅಂತು ಹೆಂಗೊ, ಯಾವುದೇ ತೊಂದರೆ ಇಲ್ಲದೆ ಮದುವೆ ಮುಗ್‌ದೋತ್.

ಈಗ ಮದುವೆಯಾಗಿ 10ವರ್ಷ ಆತ್. ಚೆಲುವೆನ ಕನ್ಸ್ ಇಂದು ಬರಿ ಒಂದ್ ಕೆಟ್ಟ ನೆನಪಾಗುಟು. ಅವಳೀಗ ಎಂತ ಹೇಳ್ದೆ ಗೊತ್ತಾ. ಹಾಸಿಗೆ ಇರೋಷ್ಟು ಕಾಲ್ ಚಾಚಕು. ಇಲ್ಲರೆ ಅತ್ತೆಯಾಗಲಿ, ಗಂಡ ನಾಗಲಿ ಯಾಗೋಳು ಒಂದಲ್ಲೊಂದು ಕಾರ ಣಕೆ ಜಗಳ ತೆಗ್ಯದು,ಹಂಗುಸುದು ಇದ್ದದೆ. ಯಾರಿಗೆ ಬೇಕ್ ಈ ನರ್ಕದ ಜೀವನ ಅಂತ ತನ್ನ ಬಗ್ಗೆ ತಾನ್ ಕಟ್ಟದ ಕನ್ಸ್‌ಗಳ ಬಗ್ಗೆ ಯಾಗೋಳೂ ಕೊರ್‌ಗಿದೆ. ●

: ನಗೆ ಹನಿಗಳು :

"ಹಾಕಿತ್ ಅಂದ್ ಖಾದಿ ಬಟ್ಟೆ
ಹೊಡ್ತ್ ಜನಂಗಳ ಮುಂದೆ ಲೊಟ್ಟೆ
ಸರ್ಕಾರಂದ ಸಿಕ್ಕಿತವಂಗೆ ಪುಕ್ಸಟೆ
ರಾಜ್ಯದ ಸುಖದ ಮಂತ್ರಿ ಪಟ್ಟೆ"

● ಪರ್ಲಕೋಟ ರಾಧಾಕೃಷ್ಣ ಸುಗು
ಬಿಳಿಗೇರಿ

○ ○ ○

ಮೊನ್ನೆ ಒಬ್ಬ ಇಂಗ್ಲೀಷ್ ಓದಿದ ಆಫೀಸರ್ ಹಳ್ಳಿಗೆ ಬಾತ್. ಅಂವ ಹಳ್ಳಿ ಹೈದನಕಲೆ ಹಿಂಗೆ ಕೇಳ್ತ್

ಆ : What is your name ?

ಹೈ : ವಾಟೆ ತಾಕೆ ಪೊಪ್ಪ, ಈಗ ಹೋತ್ ।

ಅವಂಗೆ ವಾಟೇದೇ ಗ್ಯಾನ. ಮಳೆ ಅಲ್ಲ ಕೋರಂಬೆಗೆ.

● ಪೊಡನೊಳಂಡ ಪುಸಲಿಂಗಪ್ಪ

ನಾವೆಲ್ಲ ಒಂದೇ

ಒಂದೆ...ಒಂದೆ...ನಾವೆಲ್ಲೊವು ಒಂದೆ
ಮಂಗ್ಳೂರು ಗೌಡ್‌ಗ, ಮಡಿಕೇರಿ ಗೌಡ್‌ಗ
ಅರೆಭಾಷೆ ಗೌಡ್‌ಗ ನಾವೊಂದೆ ॥

ಕೇರಳಲಿರಲಿ ಕಾಶ್ಮೀರಲಿರಲಿ
ಮನೆಮಾತ್ ಅರೆಭಾಷೆ ನಮದೊಂದೆ ॥

ಹೆಣ್ಣ್ ಕೊಡುವೊ ಜನ ಮಂಗ್ಳೂರು ಕಡೆಗೆ
ಹೆಣ್ಣ್ ತಾವೊ ಜನ ಕೊಡ್ಗ್ ನಮ್ಮೂರ್‌ಗೆ
ಅದ್ಕೆಲ್ಲ ಮಾಡ್ದುಲೆ ನಮ್ಮಲಿ ಬೇಧ
ಕೈಲುಮೂರ್ಥ ಹಬ್ಬಕೆ ಮಾತ್ರ ವಿರೋಧ ॥

ತಿಂಬೋದು ಕುಡೆದು ಒಂದೆ ಅಲ್ಲ
ನಮ್ಮ ಏಳಿಗೆ ನೆನೆಕುನಾವೆಲ್ಲ
ತಿಂಬೊದು ಕುಡೆದೆ ಗುರಿ ನಮ್ಮದಾದರೆ
ಈ ಕಟ್ಟಡ, ಸೈಟ್‌ಗ ಸಮಾಜಯಾಕೆಲ್ಲ ॥

ಜಾತಿ ಭಾಷೆಗ ಎಲ್ಲೆಲ್ಲೂ ಉಟ್ಟು
ಒಗ್ಗಟ್ಟ್ ನೋಡಿನಿ ಅವರ್ಲೆಸ್ಟುಟ್ಟು
ಅರೆಭಾಷೆವು ಹೀಂಗೆ ಕಿತ್ತಾಡಿರೆಹೇಂಗೆ
ನಾವ್‌ಗಿರಿಕೆಬೊತ್ತೊ ಎಲ್ಲರ ಹಾಂಗೆ ॥

ಈ ಅರೆಭಾಷೆದ್ ಎಲ್ಲೂ ಇಲ್ಲೆ
ಕೊಡ್ಗ್ ದಕ್ಷಿಣ ಕನ್ನಡ ಅಲ್ಲೆ
ನಮ್ಮಲಿ ಮೇಲ್ ಕೀಳ್‌ಂತ ನಾವೆ
ಮಾಡಿರೆ ಹಾಳಾದು ಯಾರಲ್ಲ ನಾವೆ ॥

ಎಲ್ಲೊ ಹೊರಗಡೆ ಹೋಕನ ನಾವು
ಎದ್‌ರ್‌ಗೆ ಕಾಂಬಕೆ ಸಿಕ್ಕಿರೆ ನೀವು
ಇಬ್ರೊರು ಕಷ್ಟ ಸುಖಗಳ ಸರಸ
ಮಾಡಾತ್ತ ಹೋದವೆ ಎಲ್ಲುಟ್ಟು ವಿರಸ ॥

ಹಿರಿಯೊವಂದೆ ಹೇಳ್ದೊ ಒಂದಾಗಿರಿಕೆ
ಆ ಮಾತ್‌ನ ಕೇಳಿರೆ ಆದುಲ್ಲೊ ನಾಚಿಕೆ
ನಾವೆ ಮೇಲ್‌ಂತ ಗ್ರಹಿಸುದು ಯಾಕೆ
ಮೇಲೊಬ್ಬ ನೋಡ್ತುಟ್ಟು ಅವನೆ ಲೋಕಕ್ಕೆ ॥

● **ಹೆಚ್. ಬಿ. ಭವಾನಿಶಂಕರ್,** ಬೆಂಗಳೂರು.

ನಾಯಿ ಮರಿ ಕೊಟ್ಟನೆ

"ಕೊಡಗು ಸಂಗಾತಿ" ಪತ್ರಿಕೆ ಓದಿ, ಅರೆಭಾಷೆಲೂ ಒಂದು ಪತ್ರಿಕೆ ಬಾತಲ್ಲ ತೇಳಿ ಹೆಮ್ಮೆ ಪಟ್ಟೆ. 'ಅರೆ ಭಾಷಿಕ ವಿಭಾಗ' ಇನ್ನೊ ಜಾಸ್ತಿ ಪುಟದಲ್ಲಿ ಬಂದಿದ್ದರೆ ಇನ್ನು ಚೆಂದಆಗಿರ್‌ತಿತ್ತ್ ತೇಳಿ ನನ್ನ ಅಭಿಪ್ರಾಯ. 10ನೇ ಸಂಚಿಕೆಲಿ ಮೇರ್‌ಕಜೆ ವಿಶ್ವನಾಥ ನವು ಬರ್ದ 'ಚಾಂಪನ ಬೋರನು ಮತ್ತೆ ಪಿಳ್ಳೆನು' ಓದಿ ತುಂಬಾ ಖುಷಿ ಆತ್. ವಿಷಯ ಲಾಯ್ಕ ಆಗಿ ಮೂಡಿ ಬಂದುಟ್ಟು. ಹೇಳ್ದಂಗೆ ನನ್ನತ್ರ ಒಂದು ಕಂತ್ರಿ ನಾಯಿ ಮರಿ ಉಟ್ಟು. ನೋಡಿಕೆ ಕಂದು ಬಣ್ಣ ಮತ್ತೆ ಬೂದಿ ಬಣ್ಣಲಿ ಪಟ್ಟೆ ಪಟ್ಟೆ ಆಗಿ ಪೊರ್ಲಾದ ಮರಿ. ಬ್ಯಾಟೆ ಕಲ್ಸಿರೆ ಕಾಡ್ ಜಾತಿ ಹಿಡಿಯಕೆ ಉಸಾರ್ ಆದುತ್ತ ಕಂಡದೆ. ನನ್ನ ಪ್ಯಾಂಟ್ ಕಚ್ಚ್ದುದು, ಕಾಲ್‌ಕಚ್ಚ್ದುದು ಅದ್ ಇದ್ ಕಿರಿಕಿರಿ ಮಾಡ್‌ಕನ ಆದರ್ನ 'ಕಿರ್‌ಕಾ' ತ ಕರಿತ್ತಿದ್ದೆ. ಆಗ ಅದ್ ಬಾಲ ಅಲ್ಲಾಡ್ಸ್‌ಕಂಡ್ ಬಾತಿತ್ತ್. ಹಂಗಾಗಿ ನಾವು ಆದರ್ನ ಕಿರ್‌ಕಾ ಕಿರ್‌ಕಾ ತ ಕರಿಯಕೆ ಸುರುಮಾಡ್ದೋ. ಮತ್ತೇ ಈಗ ಇನ್ನ್ ಪೊರ್ಲು ಕಾಣ್ಲೆತ್ತೇಳಿ ನಾನ್ ಅದ್ರ ಬಾಲನ ಬುಡಂದಕಟ್ಟ್ ಮಾಡ್ದೊಳೆ. ಅದರ್ನ ಬೇಕಾರೆ ನಾನ್ ಮೇರ್‌ಕಜೆ ರಾಜಂಗೆ ಕೊಟ್ಟನೆ. ಮತ್ತೆ ಒಂದು ಮಾತ್ ಅದರ್ನ ಕಿರ್‌ಕಾ ತ ಕರಿಯೋಕು ತ ಹೇಳಿ ಆತಾ.

● **ದಂಬೆಕೋಡಿ ಹರಿಸುಬ್ರಾಯ,** ಟೆಕ್ಸಸ್ **U. S. A.**

ಹಳ್ಳಿ ಗೂಡೆ

ಹಳ್ಳಿ ಗೂಡೇಂತೇಳಿ ತಂದೋ ಪಟ್ಟಣದ ಹೈದಂಗೆ
ನೋಡಿಕೆ ಅದ್ ಮಿಂಚಿನ ಬಳ್ಳಿ
ಆದ್ರೆ ಅದ್ ಮಾತ್ನ ಮಳ್ಳಿ
ಒಂದಿನ ಹತ್ತಿತ್ ಜಗಳ
ಒಡ್ಕಂತ್ ಇರುವ ಬಳೆಗಳ
ಆದ್ರೂ ಸುಮ್ಮನೆ ಆತ್ಲೆಮಾತ್ನ ಮಳ್ಳಿ
ಆಗ ಬಾತ್ ಗಂಡನ ಕೈಗೆ ಸೌದೆಕೊಳ್ಳಿ

● **ಪಿ.ಎಲ್. ಪ್ರಸಲಿಂಗಪ್ಪ,** ಕೋಪಟ್ಟೆ ಗ್ರಾಮ

ಲಂಚ

ಬೊಗ್ಳಿಕಂಡ್ ಕಚ್ಚಿಕೆ ಬಂದನಾಯಿಗೆ
ಅದರ ಸಿಟ್ಟ್‌ನ ತಣ್ಸೆ, ಹೇಳ್ದಂಗೆ ಕುಣ್ಸಿಕೆ
ಉಪಯೋಗಿಸ್‌ವ ರೊಟ್ಟೆ ಚೂರೆ–ಲಂಚ

● **ಅಂಚೆ ಮನೆ ಸುಧಿ,** ಅಭ್ಯತ್‌ಮಂಗಲ.

ಕುಡಿ ಕಿಟ್ಟು

ಕಿಟ್ಟು ಅಪ್ಪ ಅವ್ವಂಗೆ ಒಬ್ಬನೇ ಮಂಙ್ಙ. ಕಿಟ್ಟು ಸಣ್ಣಂವನಾಗಿರ್‌ಕನ ಒಳ್ಳೆ ಬುದ್ಧಿನ ಹೈದ. ಕಿಟ್ಟು ಸ್ಕೂಲಿಗೆ ಹೋಕನ ಲ್ಯಾಕ್ ಓದ್‌ತ್ತಿತ್ತ್. ಆಟ, ಪಾಠ, ಓಟಲಿ ಬಾಳ ಚುರ್ಕ್ನ ಹೈದ. ಇಂವ ಎಲ್ಲದರ್ಲಿ ಫಸ್ಟ್ ಬಂದದ್ರಿಂತ ಮಾಸ್ಟ್ರುಬಾಯ್ಲಿ ಅಪ್ಪ ಅಮ್ಮ ಮನೆನೈ] ಮತ್ತೆ ಊರಪ್ಲೆಲ್ಲಾ ಒಳ್ಳೆ ಹೈದ.

ಕಿಟ್ಟು ಒಂದ್ನೇ ಕ್ಲಾಸಿಂದ ಏಳ್ನೇ ಕ್ಲಾಸಿಗಂಟ ಮನೆಂದ ಸ್ಕೂಲಿಗೆ ಒಬ್ಬನೇ ಹೋದು, ಬಾದು. ಹೀಂಗೆ ಓದಿಕ್ಕಂಡ್

ಹುಲಿಮನೆ ಸಹದೇವ ಕೇಶವಯ್ಯ
ಮಡೆನಾಡು

ಏಳ್ನೇ ಕ್ಲಾಸ್ಲಿ ಫಸ್ಟ್‌ಕ್ಲಾಸ್ಲಿ ಪಾಸಾಗಿ ಎಂಟನೇ ಕ್ಲಾಸಿಗೆ ಪ್ರೈವೇಟ್ ಹೈಸ್ಕೂಲಿಗೆ ಸೇರ್ದೆ. ಹೈಸ್ಕೂಲ್ಲಿ ಕಿಟ್ಟುಗೆ ಒಳ್ಳೆ ಮಾಸ್ಟ್ರು ಮತ್ತೆ ವಿದ್ಯಾರ್ಥಿಗೆ ಸಿಕ್ಕುವೆ. ಹೀಂಗೆ ಕಿಟ್ಟು ಲ್ಯಾಕ್ ಓದಿಕಂಡ್ ಹತ್ನೆ ಕ್ಲಾಸ್ಲಿ ಫಸ್ಟ್‌ಕ್ಲಾಸ್ ಪಾಸಾದೆ. ಇವನ ಬುದ್ಧಿ ನೋಡಿ ಅಪ್ಪ ಅವ್ವಂಗೆ ಭಾರಿ ಖುಷಿ ಆದೆ.

ಮುಂದೆ ಓದಿಕ್ಕೆ ಹಳ್ಳಿಲ್ಲಿ ಪ್ರೈವೇಟ್ ಕಾಲೇಜು ಇದ್ದರೂ ಪಟ್ಟಣದ ಸರ್ಕಾರಿ ಕಾಲೇಜಿಗೆ ಸೇರ್ಸ್ನವೆ. ಕಿಟ್ಟು ಕಾಲೇಜಿಗೆ ಹೋಕನ ದೊಡ್ಡ ಜನ್ರಂಗೆ ಬಸ್ಲಿ ಹೋಕೆ ಪಾಸ್ ಮಾಡ್ಸಿದೇ. **K.S.R.T.C.** ಬಸ್ಲಿ ಹೋದು. ಆಗ ಅಲ್ಲಿ ಒಳ್ಳೆ ಹೈದಗಳ ಕೂಟು ಬಿಟ್ಟು ಪೋಲಿ ಹೈದಗಳೊಟ್ಟಿಗೆ ಸೇರ್ದೆ.

ಕಿಟ್ಟು ಕಾಲೇಜಿಗೆ ಸೇರ್ದಂಗೆ ಒಂದು ವಾರ ಸರಿಯಾಗಿ ಕಾಲೇಜಿಗೆ ಹೋದೆ. ಮತ್ತೆ ಪೋಲಿ ಹೈದಗಳೊಟ್ಟಿಗೆ ಸೇರಿಕ್ಕಂಡ್ ಸಿನಿಮ ನೋಡಿಕೆ ಸುರು ಮಾಡ್ದೆ. ಸಿನಿಮದ ಮಧ್ಯಲಿ ಎಲ್ಲವೂ ಸೇರ್ಕಂಡ್ ಬೀಡಿ ಸಿಗ್ರೇಟ್ ಸೇದಿಕೆ ಸುರುಮಾಡುವೆ. ಇದು ಪೊಪ್ಪ ಅಮ್ಮಂಗೆ ಗೊತ್ತಾಗಿ ಅವಿಬ್ಬರೂ ಸಿಗ್ರೇಟ್ ಸೇದಿಕ್ಕೆ ಆಗದೇಂತ ಕಿಟ್ಟುಗೆ ಒಳ್ಳೆ ಬುದ್ಧಿ ಹೇಳ್ದೊ. ಅದ್ನ ಕ್ಯಾರ್ ಮಾಡದೇ ಸಿಗರೇಟ್ ಜಾಸ್ತಿ ಸೇದಿದೆ.

ಕಿಟ್ಟು ಕಾಲೇಜಿಗೆ ಹೋಕ್‌ನ ಒಂದು ದಿನ 'ಕಾಲೇಜ್ ಡೇ' ಬಂದದೆ ಅಂದ್ ಮಜಾ ಮಾಡಿಕೆ ಬೇಕಾಗಿ ಕಿಟ್ಟು ಅಪ್ಪನ ಜೋಬ್‌ಂದ ದುಡ್ಡು ಕದಿಯಕ್ಕೆ ಕಲ್ತತ್.

ಕಿಟ್ಟು 'ಕಾಲೇಜ್ ಡೇ ದಿನ ಪೋಲಿ ಹೈದಂಗಳೊಟ್ಟಿಗೆ ಸೇರ್ಕಂಡ್ ಒಂದು ದೊಡ್ಡ 'ಇಂಟರ್‌ನ್ಯಾಷನಲ್ ಹೋಟೆಲಿಗೆ' ಹೋದೆ. ಎಲ್ಲವೂ ಸೇರಿ **'XXX Rum'**ನ ಕುಡ್ದವೆ. ಹಾಗೆ ಕುಡಿಯೋದು ಜಾಸ್ತಿಯಾಕನ ಬಸ್ಸ್ನ ಕಂಡೆಕ್ಟ್ರಿಗೆ ದುಡ್ಡು ಕೊಡದೇ ಬಸ್ಲಿ ಅತ್ತ ಇತ್ತ ಹೋದು, ಬಾದು ಹೀಂಗೆ ಒಂದು ದಿನ ಕಂಡೆಕ್ಟರ್ ದುಡ್ಡು ಕೇಳ್‌ಕನ ಅವನೊಟ್ಟಿಗೆ ಜಗಳಾಡ್ದೆ. ಆಗ ಡ್ರೈವರ್ ಬಸ್ಸ್ನ ನಿಲ್ಸಿ ಕಂಡಕ್ಟರ್ ಒಟ್ಟಿಗೆ ಸೇರಿ ಕಿಟ್ಟುನ ಬಸ್ಸ್‌ಂದ ಕೆಳಗೆ ಎಳ್ದು ಹಾಕುವೆ.

ಕಿಟ್ಟು ಇದೇ ಸೇಡಿಗೆ ಬೇಕಾಗಿ ಮಾರನೇ ದಿನ ಪೋಲಿ ಹೈದಗಳ ಕರ್ಕಂಡ್ ಕಾಲೇಜಿಗೆ ಹೋಗದೇ ಬಸ್ಸಿನ ಕನ್ನಡಿ ಒಡ್ದು ಡ್ರೈವರ್ ಕಂಡೆಕ್ಟ್ರಿಗೆ ಹೊಡ್ದವೆ. ಇದಕ್ಕೆ **K.S.R.T.C.** ಡಿಪೋನವು ಬಸ್ಸ್ ಬಂದ್ ಮಾಡಿ ಕಾಲೇಜಿನ ಪ್ರಿನ್ಸಿಪಾಲಿಗೆ ಮತ್ತೆ ಪೋಲಿಸಿಗೆ ಕಂಪ್ಲೆಂಟ್ ಕೊಟ್ಟವೆ. ಇದರ್ನ ಎಲ್ಲಾ ನೋಡಿ ಪ್ರಿನ್ಸಿಪಾಲಿಗೆ ಸಿಟ್ಟ್ ಬಂದ್ ಕಿಟ್ಟುನ ಕಾಲೇಜಿಂದ ಡಿಬಾರ್ ಮಾಡುವೆ. ಇದರಿಂದ ಕಿಟ್ಟುನ ಜೀವನ ಹಾಳಾಗಿ ಹೋತು. ಹಾಳಾಗಿ ಮನೆ ಸೇರ್ಕನ ಇವನ ಕೈಲಿ ದುಡ್ಡು ಕಮ್ಮಿ ಆದೆ. ದುಡ್ಡು ಇರ್ಕನ ಬಾರ್‌ಗೆ ಹೋಗುವ ದುಡ್ಡು ಕಮ್ಮಿಯಾಗಿ ಇದ್ದವರ ಹತ್ರ ಎಲ್ಲಾ ಸಾಲ ಮಾಡಿ ಕೆಂಪುಬೋರ್ಡಿಗೆ ಹೋಕೆ ಸುರು ಮಾಡ್ದೆ.

ಕಾಲೇಜ್ ಪೋಲಿ ಹೈದಗಳ ಬಿಟ್ಟ್ ಮನೆ ಸೇರ್ದ ಕಿಟ್ಟು ಅಕ್ಕ ಪಕ್ಕದ ಮಕ್ಕಳ ಕರ್ಕಂಡ್ ಬೀಡಿ ಸಿಗರೇಟು ಸೇದಿಕೆ ಮತ್ತೆ ಕುಡಿಯಕ್ಕೆ ಕಲ್ಸಿತ್. ಒಳ್ಳೆ ಮಕ್ಳ ಕುಡಿಯಲ್ಲೆಂತಾ ಎಷ್ಟ್ ಹೇಳ್ರೂ ಕುಡ್‌ದರೆ ಒಂದು ತರ ಮಜಾ ಆದೇಂತೇಳಿ ಹಠ ಮಾಡಿ ಕುಡಿಸ್ತಿತ್ತ್. ಹೀಂಗೆ ಇದ್ದವುಕ್ಕೆಲ್ಲಾ ಕುಡ್ಸ್ನುದು ಇವನ ಅಭ್ಯಾಸ. ಅದಕ್ಕೆ ಕಿಟ್ಟುಗೆ "ಕುಡಿ ಕಿಟ್ಟೆ". ಅಂತ ಹೆಸರಿಟ್ಟೊ.

ಕಿಟ್ಟು ಹೀಂಗೆ ನಿಮ್ಮ ಹತ್ರ ಸಹ ಕುಡಿಯಕ್ಕೆ ಕಲ್ಸಿಕ್ಕೆ ಬಾದು. ನೀವೆಲ್ಲಾ ಎಚ್ಚರ ಇರಿ. ಕುಡಿ ಕಿಟ್ಟುನ ಜೊತೆಲಿ ಸೇರಿ ನೀವೆಲ್ಲಾ ಕುಡಿಯಕ್ಕೆ ಕಲ್ತರೆ ನನ್ನ ದೂರ್‌ಬಡಿ. ●

ನಗೆ ಹನಿ

ಒಂದು ಸಾರಿ ಕ್ಲಾಸ್‌ಲಿ ಮಾಸ್ಟ್ರು ಒಂದು ಹೈದನ ಪ್ರಶ್ನೆ ಕೇಳ್ತ್.

ಮಾಸ್ಟರ್ : ಏ ಹೈದ ನಿನ್ನ ಅಪ್ಪ ಎಂತ ಬಿಜಿನೆಸ್ ಮಾಡ್ತೆ?

ಹೈದ : ನನ್ನ ಅಪ್ಪ ಬಿಸಿ ಬಿಸಿ ಎನ್. ಎಸ್. ಮಾಡ್ತೆ ಸಾರ್.

● **ಹೊಸೂರು ಆರ್. ನಿರಂಜನ್,**
ಭಾಗಮಂಡಲ.

ಚಿರಸ್ಮರಣೆ



ಪಟ್ಟಡ ಮುತ್ತಣ್ಣ ರವಿಕುಮಾರ್, ಬಿ. ಎ.

ಜನನ : **8-2-1960**

ಮರಣ : **29-9-1991**

ನೀನು ನಮ್ಮನ್ನು ಅಗಲಿ ಇಂದಿಗೆ 7 ವರ್ಷಗಳೇ ಕಳೆದರು ನಿನ್ನ ನೆನಪು
ನಮ್ಮಲ್ಲಿ ಅಚ್ಚಳಿಯದೇ ಉಳಿದಿದೆ ನಿನ್ನ ಆತ್ಮಕ್ಕೆ ಭಗವಂತನು
ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.

ಅಣ್ಣಂದಿರಾದ ಉಲ್ಲಾಸ್, ಪ್ರಭಾಕರ, ತಿಮ್ಮಯ್ಯ
ಅತ್ತಿಗೆಯಂದಿರು, ಅಕ್ಕಂದಿರು, ಬಾವಂದಿರು,
ಪತ್ನಿ ಮತ್ತು ಮಕ್ಕಳು, ಅವಂದೂರು.

ಚಿರಸ್ಮರಣೆ



ಕರ್ಣೇಯ್ಯನ ಎಸ್. ಚಿಣ್ಣಪ್ಪ, ನಂಜರಾಯಪಟ್ಟಣ

ಜನನ : **23-6-1910**

ಮರಣ : **23-9-1983**

ನೀವು ನಮ್ಮನ್ನು ಅಗಲಿ ಇಂದಿಗೆ 14 ವರ್ಷಗಳು ಸಂದವು. ನೀವು ಹಾಕಿಕೊಟ್ಟ
ದಾರಿ ನಮಗೆಲ್ಲಾ ಮಾದರಿಯಾಗಿದೆ. ನಿಮ್ಮ ಆತ್ಮಕ್ಕೆ ಪರಮಾತ್ಮನು
ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ,

ಪತ್ನಿ ರುಕ್ಮಿಣಿ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು,
ಅಳಿಯಂದಿರು, ಸೊಸೆಯಂದಿರು, ನಂಜರಾಯಪಟ್ಟಣ.

K.R.N.N. 240

ಒಮ್ಮೆ ಭೇಟಿ ಕೊಡಿ

ಒಮ್ಮೆ ಭೇಟಿ ಕೊಡಿ

ಮೋಹಕ ಬಾರ್ ಅಂಡ್ ರೆಸ್ಟೋರೆಂಟ್

ಕಾಳಿದಾಸ ರಸ್ತೆ, ವಿ. ವಿ. ಮೊಹಲ್ಲಾ, ಮೈಸೂರು–570 002

ಜನಾಂಗದ ದೃಷ್ಟಿಯಿಂದ ಹೊರಬರುತ್ತಿರುವ ನಿಮ್ಮ ಪತ್ರಿಕೆಗೆ
ನಮ್ಮ ನಮನಗಳು

ಯಿಂದ :

ಶ್ರೀ ಹೊಸೊಕ್ಲು ಬೆಳ್ಯಪ್ಪ ಮುತ್ತಣ್ಣ

ನಿವೃತ್ತ ಭೂದಳ

ಮತ್ತು

ಹೊಸೊಕ್ಲು ಹರಿಣಿ ಬೆಳ್ಯಪ್ಪ

ಹಾಗೂ

ಕು॥ ತಿಜೋರ್ ಬೆಳ್ಯಪ್ಪ

ವಿಳಾಸ :

ನಂ. 257, ಆಂಧ್ರ ಕಾಲೋನಿ, ಹಿನಕಲ್ ಪೋಸ್ಟ್,
ಮೈಸೂರು–570 017

Printed by M K Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore-12 Published at Mysore, Editor PATTADA. P. SHEELAMANI, 322, Hinkal Village & Post, (Near Aralikatte) Mysore-570 017 Phone : 516771